A Circumnavigation to the world of Dance and Performing Arts : A complete Journal

RNI No :KARKAN/2009/29752

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ

ಚೈತ್ರ–ವೈಶಾಖ 2012

ಸಂಪುಟ : 6 ಸಂಚಿಕೆ : 2

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ನಾರಾಯಣ ಭಟ್ ಬಿ.ಜಿ
ನೆರವು : ಸಾವಿತ್ರಿ ಭಟ್ ಮತ್ತು ಸನ್ಮಿತ್ರರು
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ

ಆವರಣ ಪುಟ : ಸುನೀಲ್ ಕುಲಕರ್ಣಿ,
ಅಕ್ಷರೋದ್ಯಮ, ಮಂಗಳೂರು
ಪುಟವಿನ್ಯಾಸ ಮತ್ತು ಮುದ್ರಣ :
ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

ವಸಂತವಿಹಾರ

ಅಂತರಂಗ.....

- ಮಂಜೀರ.....2
- ಮಹಾಶಿವರಾತ್ರಿಯ ಮರೆಯಲಾರದ ದಿನ.....4
- ನೃತ್ಯ ಸಂಶೋಧಕರ ಒಕ್ಕೂಟ.....11
- ಲಲಿತ ಲಹರಿ : ಅಷ್ಟನಾಯಿಕಾ ಚಿತ್ತವೃತ್ತಿ – ಸ್ವಾಧೀನಪತಿಕೆ.....13
- ನರ್ತನ ಸುರಭಿ : ನೃತ್ಯ ಕಲಿಕೆಯೆಡೆಗೆ ನೋಟ ಬೀರುತ್ತಾ.....21
- ಹಸ್ತ ಮಯೂರಿ : ಸ್ವಸ್ತಿಕ ಹಸ್ತ.....23
- ನಿಮ್ಮ ಬರೆಹ ನಮ್ಮ ಓದು.....24

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their ownnot of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.



ಮಂಜೀರ

ಕಲೆಯೆಂದರೇನೇ ಸತ್ತ್ವಸಂಸ್ಫೂರ್ತಿ. ಅದರೊಳಗಿನ ರಸಸೌಂದರ್ಯ ಮೋದ–ಬೋಧಗಳ ಅಖಂಡಾನುಭವ. ಆದ್ದರಿಂದಲೇ ಕಲೆಯೊಂದಿಗಿನ ಒಡನಾಟದಲ್ಲಿ ಎಷ್ಟೇ ವಿಘ್ನಗಳೆದುರಾದರೂ ಅದು ಈ ಯುವ ಜೀವನವನ್ನು–ನಮ್ಮನ್ನು ಮರುಶೋಧಿಸಿಕೊಳ್ಳುವ ಕಾಣ್ಕೆಯ, ಸೌಭಾಗ್ಯದ ಮುಂದೆ ಉಳಿದದ್ದೆಲ್ಲಾ ಗೌಣವೆನಿಸುತ್ತದೆ. ಭಾವಬುದ್ಧಿಗಳಿಗೆ ಸಂಸ್ಕಾರವನ್ನೂ, ಸತ್ತ್ವೋದ್ರೇಕಗಳಿಗೆ ಪರಮಾವಕಾಶವನ್ನೂ ನೀಡುವ ಬೊಗಸೆಯನ್ನು ಮೊಗೆಮೊಗೆದು ಹೀರುವ ಹಜ್ಜೆ ಹಜ್ಜೆಗೂ ಜೀವನ ಚೈತ್ಯನ್ಯ ಪುಟಿಯುತ್ತಿರುತ್ತದೆ. ಅದರಲ್ಲೂ ಕಲೆಯ ಅಧ್ಯಾತ್ಮನಿಷ್ಠೆಯಾದ ರಸವನ್ನೂ, ಆ ಮೂಲಕ ಭಗವತ್ ದರ್ಶನವನ್ನೂ ಕಾಣುವ ಹೆಜ್ಜೆಯಲ್ಲಿ ನಮ್ಮನ್ನು ತೇಯುವುದು ನಿಜಕ್ಕೂ ಗಂಧದ ಕೊರಡಿನ ಅನುಭವವೇ ಸರಿ. ಅಂತಹ ಸುಸಂದರ್ಭ ಒದಗಿದ್ದು ಮಹಾಶಿವರಾತ್ರಿಯ ಸುದಿನದಂದು.

ಬೆನ್ನತ್ತಿ ಬಂದ ಬೇಗುದಿ, ಅನವರತ ಆತಂಕ, ಗಡಿಬಿಡಿಯ ಓಡಾಟ, ಸಮಯದ ಹೊಂದಾಣಿಕೆಯಲ್ಲಾಗುವ ಸಂದಿಗ್ಧತೆ, ಅಳುಕು, ಅಳು–ನಗು..ಹೀಗೆ ಸಂಘಟನೆಯ ಹಿಂದಿನ ಸಂಕಟಗಳಿಂದಾಚೆಗೂ ಧನ್ಯತೆಯನ್ನೂ; ಕೃತಕೃತ್ಯತೆಯ ನೆನವರಿಕೆಗಳನ್ನು, ಪರಸ್ಪರ ಕೈಹಿಡಿದು ಮುನ್ನಡೆವ ದಾರಿಯನ್ನು, ಸಾಧಿಸುವ ಛಲವನ್ನು, ಕಣ್ಣಂಚಿನಲ್ಲಿ ಆನಂದದ ಹನಿ ನೀರನ್ನು ಇತ್ತದ್ದು ಕರ್ನಾಟಕದ ಮೊದಲ ನೃತ್ಯ ಸಂಶೋಧನಾ ವಿಚಾರಸಂಕಿರಣ. ನಾಲ್ಕು ಪ್ರಬುದ್ಧ ಸಂಶೋಧನಾ ಪ್ರಬಂಧವಾಚನ, 3 ವಿಶೇಷ ಉಪನ್ಯಾಸ, ವಿದ್ವಾಂಸರೊಂದಿಗೆ ಸಂವಾದ, ವಿಮರ್ಶಾ ಪ್ರಶಸ್ತಿ, ಹಿರಿಯ ಸಂಶೋಧಕರಿಂದ ಆಶೀರ್ವಾದದೊಂದಿಗಿನ ಬೆಂಬಲ, ಚಿಂತನ–ಮಂಥನ, ಸಂಶೋಧನಾಧಾರಿತ ನೃತ್ಯ ಕಾರ್ಯಕ್ರಮ ಮತ್ತು ಎಲ್ಲಾ ಪ್ರಯತ್ನಕ್ಕೂ ಭವಿತವ್ಯದಲ್ಲಿ ಸಿದ್ಧ ಅಡಿಪಾಯ ನೀಡುವಂತೆ ಒಲುಮೆಯ ಗೆಳೆಯರ ಸದಾಶಯದೊಂದಿಗೆ ಪ್ರಾರಂಭವಾದ ನೃತ್ಯ ಸಂಶೋಧಕರ ಒಕ್ಕೂಟವೆಂಬ ಸಂಶೋಧನೆ–ನೃತ್ಯದ ತಂತುಗಳನ್ನು ಬೆಸೆಯುವ ಕೆಲಸ. ಒಟ್ಟಿನಲ್ಲಿ ಇಡೀ ದಿನದ ಎಲ್ಲಾ ವಿಚಾರ–ವಿಶೇಷಗಳನ್ನು ಬರೆಯಹೊರಟರೆ ಪುಟಗಟ್ಟಲೆ ಸಾಲದು.

ಹಾಗೆ ನೋಡಿದರೆ ನಮ್ಮೊಳಗಿನ ಕೊರತೆ, ವಿಫುಲತೆ, ಅವಕಾಶ, ಅಗತ್ಯಗಳ ಸಾಕಾರ ದರ್ಶನವಾಗುವುದೂ ಇಂತಹ ಸಂದರ್ಭದಲ್ಲಿಯೇ. ಒಂದರ್ಥದಲ್ಲಿ 'ಆಗುವುದೆಲ್ಲಾ ಒಳ್ಳೆಯದಕ್ಕೇ' ಎಂಬ ಋಷಿವಾಕ್ಯವನ್ನು ಆಗಾಗ್ಗೆ ಮನದಟ್ಟು ಮಾಡಿಕೊಂಡರೆ ಆ ಮೂಲಕವಾಗಿ ನಮ್ಮಿಂದ ಕಲೆಯ ಒಟ್ಟಂದಕ್ಕೆ ಒದಗಬೇಕಾದ ಸೊಬಗಿನ ದರ್ಶನವೂ ಆಗುತ್ತದೆ. ಒಂದೆರಡು ದಿನವೆನ್ನದೆ ತಿಂಗಳಾನುಗಟ್ಟಲೆ ಇಂತಹ ಒಂದು ಧನ್ಯಮಿಲನಕ್ಕೆ ಸ್ಫೂರ್ತಿಯನ್ನೀವ ಕಾರ್ಯಕ್ರಮವನ್ನು ರೂಪಿಸುವಲ್ಲಿ ಅದೇನೇ ಜಂಜಡ–ಒತ್ತಡಗಳಿದ್ದರೂ ಕೂಡಾ, ಕಾತರಿಕೆಯ ಚಡಪಡಿಕೆಗಳು ಮತ್ತಷ್ಟು ಬದ್ಧತೆಯನ್ನು ನೀಡುತ್ತಾ ಸಾಗುತ್ತದೆ; ನಮ್ಮೆಲ್ಲರನ್ನೂ ಜೀವಂತಿಕೆಯಿಂದ ತುಡಿಯುವಂತೆ ಮಾಡುವಲ್ಲಿ; ನವೋನ್ಮೇಷ ನವಚೈತನ್ಯದ ಬುಗ್ಗೆಯನ್ನುಕಿಸುವಲ್ಲಿ ಇಂತಹ ಯೋಚನೆ–ಯೋಜನೆಗಳು ನಮ್ಮನ್ನು ಸದಾ ಕಾರ್ಯತತ್ಪರರಾಗುವ ಅನುಭವ ನಿಜಕ್ಕೂ ಅಸದೃಶ. ಸಮಗ್ರವಾಗಿ ಹೇಳುವುದಾದರೆ 'ಹನಿಗೂಡೆ ಹಳ್ಳ; ತೆನೆಗೂಡೆ ಬಳ್ಳ' ಎಂಬ ಮಾತಿಗೆ ಸಾಕಾರ ರೂಪ.

ಒಟ್ಟಿನಲ್ಲಿ ಕಲಾಸಂಶೋಧನೆಯ ವ್ಯಾಪ್ತಿಯ ಅರಿವನ್ನು ಸ್ಪಷ್ಟಪಡಿಸಿಕೊಳ್ಳುತ್ತಾ ಹೊಸ ಹೊಳಹುಗಳನ್ನು ಕಾಣುತ್ತಾ, ಶೋಧದ ದಾರಿಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ನಮ್ಮಿಂದಾದ ಈ ಕಿರುಪ್ರಯತ್ನದ ತುಂಬಾ ಧನ್ಯತೆ ಮನೆಮಾಡಿದೆ. ಇಂತಹ ಸಾರ್ಥಕ ಸನ್ನಿವೇಶಕ್ಕೆ ನೆರವಿತ್ತ ಸಕಲ ಸಹೃದಯರಿಗೂ, ಭಾಗವಹಿಸಿ ಪ್ರೋತ್ಸಾಹಿಸಿದ ಸಮಸ್ತ ಮಹನೀಯರಿಗೂ ಆದರಾಭಿಮಾನದ ಅನಂತ ಅಭಿವಂದನೆ.

ನೂಪುರ ಭ್ರಮರಿ ಪತ್ರಿಕೆಯಾಗಿ, ಪ್ರತಿಷ್ಠಾನವಾಗಿ, ಪ್ರಕಾಶನವಾಗಿ, ಒಕ್ಕೂಟವಾಗಿ ಬೆಳೆಯುವ ಈ ಹಂತಕ್ಕೆ ಸಾಕಷ್ಟು ಮಂದಿ ಕೈಜೋಡಿಸಿದ್ದಾರೆ; ಸಲಹಿದ್ದಾರೆ; ಪೋಷಣೆಯಿತ್ತು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಕಾರಣ, ಇದು ಓರ್ವ ವ್ಯಕ್ತಿಗೆ ಮೀಸಲಾದ ಸಂಸ್ಥೆಯಲ್ಲ. ದುಡಿಯುವ ಸಮಸ್ತರಿಗೂ ಸೇರಿದ್ದು. ಈ ಧೈರ್ಯದಲ್ಲೇ ನಮ್ಮ ನೃತ್ಯ ಸಂಶೋಧಕರ ಒಕ್ಕೂಟದಿಂದ ಮತ್ತೊಂದಷ್ಟು ಯೋಜನೆಗಳು ರೂಪ ಪಡೆದುಕೊಳ್ಳುತ್ತಿವೆ. ಸಂಶೋಧಕರಿಗೆಂದೇ ಗ್ರಂಥಾಲಯ ರೂಪುರೇಷೆ, ಮಾಸಿಕ ಉಪನ್ಯಾಸ–ಕಾರ್ಯಾಗಾರ, ಸಂಶೋಧನಾ ಶೈಕ್ಷಣಿಕ ತರಗತಿಗಳು, ವಿಚಾರಸಂಕಿರಣದ ಸಮಗ್ರ ನೋಟವನ್ನು ದಾಖಲಿಸುವಲ್ಲಿ ಮುಂದಿನ ವರುಷದ ವೇಳೆಗೆ ಕ್ರಮಬದ್ಧವಾದ ಸಂಶೋಧನಾ ಸಂಕಲನ ಒಕ್ಕೂಟದ ಮುಂದಿನ ನಡೆಗಳು.

ಕಲಾಸಂಶೋಧನೆಯ ಗುಣಮಟ್ಟ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಸೂಕ್ತ ನಡಾವಳಿಗಳ ಅಗತ್ಯತೆ ಮನಗಂಡು ಭಾರತೀಯ ಸಂಶೋಧನಾ ನೆಲೆಯನುಸಾರವಾಗಿ ಕಲೆಗೆ ಒದಗಬೇಕಾದ ಸಂಸ್ಪರ್ಶಗಳನ್ನೇ ಮುಖ್ಯ ಉದ್ದೇಶವಾಗಿ ಹೊತ್ತು, ವಾಸ್ತವದ ಇತಿಮಿತಿಯನ್ನು ಅರಿತು ಮುನ್ನಡೆಯುತ್ತಿದ್ದೇವೆ. ಕಲೆಗೆ ಎಷ್ಟರಮಟ್ಟಿಗೆ ಕೊಡುಗೆ ನೀಡಬಹುದು ಎಂಬ ದಾರ್ಷ್ಟ್ಯಕ್ಕಿಂತ ಹೆಚ್ಚಾಗಿ ನಮ್ಮೆಲ್ಲರ ಮತ್ತು ಭವಿಷ್ಯದಲ್ಲಿ ಆಶೋತ್ತರ ಹೊತ್ತು ಬರುವ ಹಲವರ ನಡುವಿನ ಶ್ರಮವನ್ನು ಎಷ್ಟರಮಟ್ಟಿಗೆ ಫಲಪ್ರದವಾಗಿಸಿಕೊಳ್ಳಬಹುದು ಎಂಬುದರತ್ತ ನಮ್ಮ ನಿಲುವು.

ಕಲೆ ಮತ್ತು ಸಂಶೋಧನೆಯ ನಡುವಿನ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳುತ್ತಾ ಕಾಲಕಾಲಕ್ಕೂ ಅಗತ್ಯವಾದ ರಸದೃಷ್ಟಿ, ಕಾಲ–ದೇಶಕ್ಕೆ ಪೂರಕವಾದ ಔಚಿತ್ಯಪ್ರಜ್ಞೆಯನ್ನು ಕಾಯ್ದುಕೊಳ್ಳಬೇಕೆಂಬ ಹಪಹಪಿಕೆ ನಮ್ಮದು. ಜೊತೆಗೆ ಪ್ರದರ್ಶಕ ಕಲೆಯೆಂಬ ಮಾತ್ರಕ್ಕೆ ಶಾಸ್ತ್ರ–ಪ್ರಯೋಗದ ಔಚಿತ್ಯ, ನಾವೀನ್ಯಗಳು ಮರೆಯಾಗುತ್ತಿರುವ ಹೊತ್ತು ಇಂತಹ ಒಂದು ಪ್ರಯತ್ನ ಚಿಗುರೊಡೆಯಬೇಕಾಗಿದೆ ಎಂಬುದನ್ನೇ ಆಶಯವಾಗಿರಿಸಿ ಒಂದಷ್ಟು ಗುರಿ, ಪರಿಕಲ್ಪನೆಗಳನ್ನು ಜೊತೆಗಿಟ್ಟು ಸಾಹಸಕ್ಕೆ ಮುಂದಾಗುತ್ತಿದ್ದೇವೆ. ನಿಮ್ಮ ಸಲಹೆ–ಸೂಚನೆಗಳು ರಸಸೌಂದರ್ಯವನ್ನು, ಜೀವಚೈತನ್ಯವನ್ನು ಶೋಧಿಸುತ್ತಾ, ದರ್ಶಿಸುತ್ತಾ ನಮಗೆ ಪ್ರೇರಕ, ಪೋಷಕವಾಗಲಿ. ನಮ್ಮೆಲ್ಲರೊಳಗಿನ ಅಮೂರ್ತಶಕ್ತಿಯನ್ನು ಮೂರ್ತರೂಪಕ್ಕಿಳಿಸಲಿ. ಸಂಶೋಧನಾ ಸತ್ರದಲ್ಲಿ ಒಂದಾಗಲಿಚ್ಛಿಸುವ ಮನಸ್ಸುಗಳಿಗೆ ಸೇತು ಬೆಸೆಯುವ ಕಾರ್ಯ ಕರುನಾಡಿನಿಂದಲೇ ಮೊದಲ್ಗೊಳ್ಳಲಿ. ಆಶಯ ನಮ್ಮದು. ಹಾರೈಕೆ ನಿಮ್ಮದು.

ಪ್ರೀತಿಯಿಂದ,
ಸಂಪಾದಕರು

ಮಹಾಶಿವರಾತ್ರಿಯ ಮರೆಯಲಾರದ ದಿನ

Karnataka State level One day Seminar on 'Research in Dance – Process and Challenges'

Noopura Bhramari Foundation (R.) and Karnataka Researchers Federation, Bengaluru jointly organised a one day Workshop/ Seminar on "Research in Dance – Process and Challenges", the first of its kind in Karnataka. It was held On 20th February 2012 on the day of Mahashivrathri, at Nayana Auditorium, Kannada Bhavana, JC Road, Bangalore. On this occasion 'Dance researchers Association' also inaugurated.

The day long events were inaugurated by Smt. Leela devi R. Prasad, (Former Minister, Department of Kannada and Culture). She praised the organisers for choosing such an auspicious day and congratulated their effort. The Karnataka Researchers Federation expressed its pride to support a research based workshop, assured its participation and support to all in the research field from all disciplines in such endeavours in future also.

A special edition of Noopura Bhramari including data on PhD, D.lit research work done and undertaken till date by various researchers in Karnataka with respect to Classical Dance, Folk Dance, Yakshagana and the list of Dance books and periodicals in Karnataka was released by the legendary Multilingual scholar and Poet, Shatavadani Dr. R. Ganesh. As Dr. H.S. Gopala Rao (Epigraphist / Historian)

was unwell, the benedictory message and expert note sent by him was read by Smt. Manorama B.N., President & Editor, Noopura Bhramari Foundation. He conveyed the need for interdisciplinary studies. No art is independent; hence an artiste is complete and competent in his creation, only when he is best acquainted with all related arts. He summed up saying that this outlook and vision was called research orientation.



Dr. Shesha Shastri

The sessions were presided over by Dr. Shesha Shastri, renowned scholar in Kannada and Cultural history of Karnataka. In his key note address, drew attention towards the present situation in the field of dance. Amidst gurus of traditional approach and experimental outlook, there are as many, gurus who are just opportunists, under qualified but pose as experts of dance. They lack the necessary discipline, patience and commitment. The best way to improve the situation is to make these people aware of the Natyashastra. But the knowledge of Natyashastra should not be restricted to gurus and students. It should be accessible to the spectators which will make the process of rasa more meaningful.

Then, he insisted on the insight for research in artistes which alone would improve the quality of performance. He added that one cannot question a researcher's authenticity in his dedication to the work, but one has all the rights to question the authenticity of the work, as newer and newer works are born of such questioning. Thus, Dr. Shesa Shastri clearly demarcated between the personal and impersonal factors in research. He emphasized the need to understand the methodology first. All research will not have same methodology and methodology itself will not become a research. One does not become a poet just by learning language and aesthetics. He has to first understand different methodologies and follow those which help him to project his sincerity and logic. The degree does prove that he is a researcher. He should possess the quality of humility in him.

Smt. Manorama welcomed the gathering and provided introduction to the whole day programme. Dr. Revayya Wodeyar, Secretary, Karnataka Samshodhakara Okkuta, presented vote of thanks. Smt Tejaswini sang invocatory song; while Smt. Niveditha Srinivas compered.

The morning sessions were presented by resource persons. The first paper was presented by Dr. Karuna Vijayendra, Art Historian, Bengaluru. Her paper on "Mahanata- an Appraisal", was received with astonishment at the magnitude of research that went behind it. The 'roudra' form of shiva of Vedic period took to a

Dr. Karuna Vijayendra (L),
Dr. Shobha Sashikumar (R)

peaceful form, sporting white robe with beautiful expression, by the time of the Chalukyas. 'Mahanata', is one such sculpture of Shiva with eighteen hands at the Badami caves of the early Chalukya dynasty. It was not called as Nataraja as is called today. Moreover, the Nataraja though originated in Tamil Nadu, its root can be traced to Kashmir. The Scholar observed that, the dance sculptures of Saptha Matrukas with the Parivara of Shiva are found only in Badami Chalukyas of Karnataka. Besides identifying the relevant karanas in the sculpture, the scholar also introduced to the participants with the necessary visuals, the uniqueness of the movements in the Karnataka style. The lecture was supported by demonstration of Karanas by Dr. Shobha Shashikumar.

The next paper, 'Confluence of Theory and Practice in Bharatanatyam' was presented by Dr. Shobha Shashikumar, researcher and performer, guest lecturer, Jain University, Bangalore. Her paper summed up the meeting point of theory and practice in Bharatanatyam. An insight into the shastras would help identify the lacuna in practice. Such studies are an urgent need in Bharatanatyam, as there has been a dangerous deviation from the shastras. Many dancers are not aware of the background of dance. Dance is not a mere technique. It is a flowing river. It is supported by sculpture, painting, history, etc. The knowledge of the other facets of art is a must. But in today's world, pure dance(Nrutta) and abhinaya are looked at in different planes. Nrutta is considered sans emotion which is the height of ignorance. The importance of Nrutta is in preparing the minds of the spectator for certain conditions in the presentation. And presenting dance numbers which are taught at basic level hardly lead to Rasotpatti. The lecture was supported by demonstration by Kum Keertana, disciple of the speaker and helped in understanding how Natya Shastra techniques would enhance performance techniques. The session triggered an interesting and vigorous discussion.

Dr. Shobha Sashikumar

The next paper was presented by Smt. Manorama B.N., Researcher, Editor,

Noopura Bhramari, on the 'Representation of dance in the Kannada novels'. An exhaustive approach in the analysis of the novels was evident from all angles including language, characterisation of heroines, their representation and influence on the society, its adoptability to other media and finally the extent of dance content in these characters. She observed that, the more the novels work on tightness of content and portrayal technique, the more are the chances of them being adapted to other mediums such as theatre, cinema, thus realizing in a fruitful, visual touch. Most of the historical novels have worked on, Natyarani Shantala, as the seed of the plot. These in turn widen the scope of looking at the historical perspective in different ways. Apart from such novels there are many more in other languages as well which bring in the element of dance in them, which throwing light on how the Indian literary filed has utilized dance leading to parallel developments in both the fields. She concluded by opening opportunities to work more in this direction.

Manorama B.N.

The second part of the convention gave paper presentations by young researchers. The session included brief papers by serious researchers working for their thesis. Smt. Shalini presented a paper on 'Placement of the compositions of the Tanjore brothers in today's Bharatanatyam'. She clearly brought out through a graphical depiction, how the compositions of the Tanjore brothers in the format of jathiswarams, shabdams, varnams, padams, javalis and thillanas are the most danced for in in the conventional schools, despite the fact that many new composers are making a mark in the field.

Shalini Vittal

Next, Smt. Sapna Nayak from Goa presented her paper on 'The development and changes in the Aharya of Bharatanatyam in the period between 1910 and 2010'. Her observations were well supported by old and new photographs with an exhaustive collection.

Sapna Nayak



Sudhir Kumar

The third speaker was Sri Sudhir Kumar, who spoke on, the 'Application of Film music to Bharatanatyam'. He argued how, many lyrics from the films were suitable to Bharatanatyam as the sahitya and sangeetha offered scope for representation.

The last paper was of Dr. Satish Kumar Andinje on 'Folk Dances of Coastal Karnataka as a medium of communication', but presented by Sri Padmanabha, due to the absence of the former, owing to his personal problems. Sri Satish enquired, how effective were the folk dances in the communication of social messages. He presented a survey report where, folk dances for social, cultural and spiritual values were evaluated for. The sessions were debated upon and thereby had a vigorous approach.

Padmanabha

The following session saw an open discussion in the topic 'Relevance of dance research; responsibilities, processes and opportunities'. Shatavadani Dr. R. Ganesh briefed about the dance presentations, their responsibilities involved, problems faced, methodology followed and opportunities available. Leading and conducting the questions and answers session, he enlightened on research work in the dance field. The discussions were encouraged, supported and enriched by the involvement of many scholars and researchers presented in the seminar.

Shatavadhani Dr. R. Ganesh

Noopura Bhramari Foundation conferred the **Best Dance Critic award of the year** to Smt. Pratibha Samaga, and husband, Sri. M. L. Samaga, (President of Karnataka Yakshagana Bayalayata Akademy) was by her side. Respected Guru of Mysore style Smt Lalitha Srinivasan being present at the time, did the honours of garlanding the awardee. Smt.Pratibha shared her experiences, thoughts, gratitude after receiving the award. Trustee of Noopura

Bhramari Sri Vishnuprasad read the certificate of honour while Smt Shalini Vittal introduced the awardee.

Best Dance criticism Award to Pratibha Samaga

Renowned Dancer and film actor Sri Shridhar, the chief guest of the evening, delivered his address to the sabha. He stressed the importance of unifying theory and practice in dance. He added that theory helps to sink into the innermost depths of sahitya from where the dance should spring out, lest the dance should be akin to a parrot's delivery of the teacher's choreography. Without understanding the 'Sthayi rasa', without a deeper knowledge of the subject, a dancer ventures into performance, these days. It has become a common notion that dance is from the ruins and is a remainder. He then pointed out to the time of Devadasi who were known for their perseverance, discipline and honesty. He expressed his grief over fading away of such values with time. The hereditary dancers, learning dance for years, know the mammoth form of art but those who do a short visit to classes are a threat to the field. At this point of time, the path of research as a retrospective, introspective approach will benefit the development of dance.

Shridhar

Theory is no different from practice. Both represent the intimate relationship in the concept of 'Ardhanarishwara'. The divorce between them throws away one's knowledge. When compared to the numerous researches of other fields, those in the field of art are only a few and rare too. Research is the result of one's interest to know. It doesn't end with a degree. When undertaken and progressed with appropriate methodology, it raises to true degree. For expertise in dance experimentation, research is essential. Neat performances presented in the name of tradition will in no way contribute to the survival of dance. The performances should be a result of the involvement of the self. This will bring the dance to life and a perennial river starts flowing. In this direction the very thought of researchers workshop, dance researchers' association, is new to Karnataka. He wished the association good progress in future.

Distributing the Certificates to participants

Dr. Shobha Shashikumar

In his presidential speech, Dr. R. Shesha Shastry, congratulated the association for its way of working, appreciated the effort of the Noopura Bhramari Foundation in identifying able critics and honouring them. This gesture is rare to find in the field of art. He added that, this effort would only enhance the responsibilities of the critics thus making them more aware of the facts of the field. Certificates were distributed to dancers, research enthusiasts participated in the workshop by Dr. Shesha Sastry and Sri Sridhar. While Smt Manorama presented her pre-award welcome address and thanked supporters, Smt Padmini compeered.

Dr. Shobha Shashikumar presented a research based performance in the evening, incorporating the Natya Shastra and Alankara Shastra techniques in her performance; which was very well received leaving the sahrudayas spell bound. The performance which went on for two hours was inspiringly supported by Vid. Prasanna on the nattuvangam, Vid. Sriranjani on the vocal, Vid. Janardhan on the mridangam, Vid. Venugopal on the Flute, Vid. Shubha on the veena. Dr. Karuna Vijayendra rendered technical support to the whole unit and Dr. Ganesh concluded by pointing to the propriety, significance and greatness of the performance. Members of the Dance research association, Sri. Srinivas and Smt. Vedavathi honoured the music ensemble.

The whole day's sessions and performance were dedicated to Guru. Smt Sundari Santanam (Late), a great visionary and contributory in the field of dance in the name 'Sundari Sanje'.

Noopura Bhramari Dance Researchers' Association saw its first initiative to the cause of research, a great success. Since then it has been receiving appreciation, encouragement, invitation to good platforms for more such work, memberships from the research arena etc. The team of research committee that put its heart and soul into the whole event right from its conceptualisation to its happening on the day takes pride in the success. The association feels greatly indebted directly and indirectly to many, primarily to all supporters of research and carries with it fresh spirits and dreams to march ahead with good work in future.

The Association is the result of exchange of thoughts and ideas over the years among a few thinkers dedicated to dance to come up with a scheme for identifying the problems in the field of dance, the challenges in the field of research and the responsibilities attached to these and finding appropriate solutions and methodologies.

Noopura Bhramari Researchers Association

Noopura Bhramari Foundation created a new wing called **Nritya Samshodhakara Okkoota**, which is an association exclusively meant for creating opportunities for objective studies and systematic research in dance culture. This association is formally inaugurated on February 20, 2012 (the Mahashivarathri day), at Nayana auditorium at Bangalore.

The Association is the result of exchange of thoughts and ideas over the years among a few thinkers dedicated to dance to come up with a scheme for identifying the problems in the field of dance, the challenges in the field of research and the responsibilities attached to these and finding appropriate solutions and methodologies. Dedicated researchers/students may become members of the Association and get assistance for smoothly carrying on futuristic research activities. The first step in this endeavor is the holding of a one day research workshop/ seminar, which is the first of its kind in the entire state. The foundation aims at throwing light on new thoughts and efforts towards facilitating earnest researchers in their endeavour.

Aspirations of the Association

- The Association shall not have any language or geographical barriers. It shall have an extensive field of operation. It shall welcome and provide opportunities for new and self-searching research. It shall avoid propounding a oft-repeated subjects.
- It shall aid to unite researchers in dance and create a mutually cordial relationship among them. In depth studies and comprehensive instruction will be the path that the Association will take in this direction.
- The Association shall principally aim to create and establish appropriate direction and model for research for young researchers and youth as such. Thus, though the Association shall respect seniority, it shall honor profundity of knowledge. It shall chart timely research unfettered by position/prestige/age.
- The Association shall not be victimized by political, secretive, fictitious and gossip like news. It shall provide and protect friendly and fraternal environment and conduct.
- The Association shall undertake programmes to emphasize the relationship between practice and theory.
- The Association shall create and establish specific parameters and direction as well as facilities for research in music and other fine arts that complement dance.
- In addition to organizing annual and other occasion-specific functions and celebrations, the Association shall enlist the help of resource persons for conducting research-oriented lectures, workshops, symposia, demonstrations and the like in appropriately devised manner.
- The Association shall organize every year a symposium around the time of Mahashivarathri and provide opportunity to new researchers and for research, research-based dance recitals and demonstrations. It shall collect the research papers presented at such symposium, edit and publish these in an appropriate

periodical and also record the recitals and demonstrations in video CD forms.

- The function/lecture series/seminars/ demonstration/class/meeting are not confined to Bangalore region only. The Association is not only meant for dancers, researchers or specific category who possess the qualification related to dance/ music; but also the general public from any vocation as well as students, parents who interested to give new initiatives and wish to do research in coming days.
- To join the Association membership fee is Rs.1500-00 or such sum as its principal committee may decide from time to time depending on the exigencies. It may extend special facilities and concessions to members depending on the appropriateness, scope and nature of the programme. It shall make available the help and guidance of resource persons to members for pursuing research. Depending upon the quality and the circumstances, it may extend the benefits provided by its mother organization Noopura Bhramari Prathishthana and associate organs Noopura Bhramari magazine and Saanidhya Printers & Publishers.

Honourary Advisers

Dr. Shathavadhani R. Ganesh
Dr. H.S. Gopala Rao

The Association hopes to expand the principal committee and the team of advisors in the coming days.

Principal Committee of the Association

Manorama B.N.
(Convenor-Administration wing Supervisor)

Dr. Karuna Vijayendra
(Academic section chief)

Dr. Shobha Shashikumar
(Performance wing chief)

Vishnuprasad N.
(Trustee, Treasurer)

Niveditha Srinivas
(Library and Archives chief)

Shalini Vittal
(Office and Documnetation supervisor)

Padmini Kumar
(Office and Documentation supervisor)

Hurry up…

Vedavati, Hindustani vocalist, Bangalore.
Dr.Shrinivas, Therapist, Bangalore.
Vidya, Bharathanatyam Artist, Bangalore
Anantaram, BTM cultural Academy President, Bangalore.
Dr.Radhika Ranjini, Lecturer, Dance Department, Bangalore University.
Deepak Kumar, Bhrathanatyam exponent, Mookambika Natyalaya, Puttur.
Sahana Bhat, Bhrathanatyam exponent, 'Natyanjali', Hubballi.
Rekha Hegde, Bhrathanatyam exponent, 'Shantala Natyalayala', Belagavi.
…And many more who registered their names.

Orgainising monthly research methodology class with lecture demonstration by experts and generalbody meeting will be in 2012 May-June month.
Come and join your hands. Let us create a history !

ಲಲಿತ ಲಹರಿ

ಅಷ್ಟನಾಯಿಕಾ ಚಿತ್ತವೃತ್ತಿ

ಸ್ವಾಧೀನಪತಿಕೆ

(ಕಳೆದ ಸಂಚಿಕೆಯಿಂದ ಮುಂದುವರೆದುದು...) –'ಮನೂ'ಬನ.

ನಾಯಕನಿಗೆ ಅರ್ಪಿಸಲ್ಪಟ್ಟು; ಅವನ ಆಜ್ಞಾನುವರ್ತಿಯಾಗುತ್ತಲೇ ಆತನನ್ನು ತನ್ನ ಪ್ರೇಮದ ಸ್ವಾಧೀನವನ್ನಾಗಿಸಿಕೊಳ್ಳುವ ನಾಯಿಕೆ ಸ್ವಾಧೀನಪತಿಕೆ. ಅನುರಾಗದಿಂದ ಪತಿಯನ್ನು ಕೂಡಿ; ಒಂದು ಘಳಿಗೆಯೂ ಬಿಡದಂತೆ ಆಶ್ರಯಿಸಿದ್ದು; ಅವನೊಡನೆ ಸಲ್ಲಾಪಕ್ರೀಡೆಗಳನ್ನು ನಡೆಸುತ್ತಾ ; ತನ್ನ ಅದೃಷ್ಟವನ್ನು ಕೊಂಡಾಡುತ್ತಾ, ತನ್ನ ನಾಯಕನ ಕುರಿತು ಹೆಮ್ಮೆ–ಗರ್ವಪಡುವವಳು ಈಕೆ. ಅಂತೆಯೇ ಪ್ರಿಯನನ್ನು ತನ್ನ ಅಂಗೈಯಲ್ಲಿರಿಸಿಕೊಂಡು ಆಡಿಸಿ ಆನಂದಿಸುವವಳೂ ಸ್ವಾಧೀನಪತಿಕೆಯೇ. ಈಕೆಯ ಇನಿಯ ಇವಳಿಗೆ ವಿಧೇಯ. ಲಜ್ಜೆ, ಆತ್ಮವಿಶ್ವಾಸ, ನಿರ್ಭೀತಿ, ಉಲ್ಲಾಸ, ಹುರುಪು, ಆಟೋಟ–ನೃತ್ಯಾದಿಗಳಲ್ಲಿ ಭಾಗವಹಿಸುವುದು, ಸಂತೋಷದಿಂದ ಕಾರ್ಯೋನ್ಮುಖಳಾಗುವುದು, ಪೂಜಾದಿ ಉತ್ಸವದಲ್ಲಿ ನಿರತಳಾಗುವುದು, ಜಲಕ್ರೀಡೆ, ಪುಷ್ಪಶಯ್ಯೆ, ಅಲಂಕಾರ, ಆರಾಧನೆ, ಶೃಂಗಾರ, ವನಸಂಚಾರ.., ಹೀಗೆ ಹತ್ತು ಹಲವು ಆನಂದದ ಚರ್ಯೆಗಳು, ಅನುಭಾವ–ವಿಭಾವ–ಸಂಚಾರಿಭಾವಗಳು ಈಕೆಯವು. ಒಟ್ಟಿನಲ್ಲಿ ಹಲವು ಅವಸ್ಥೆಗಳನ್ನು ದಾಟಿಬಂದ ನಾಯಿಕೆ ಕಲಹವಾಡಿದರೂ ಗಂಡ ಹೆಂಡಿರ ಜಗಳ ಉಂಡು ಮಲಗುವ ವರೆಗೆ ಎಂಬಂತೆ ಸಖ್ಯ ಕುದುರುವಲ್ಲಿಗೆ ಸ್ವಾಧೀನಪತಿಕೆಯ ದರ್ಶನವಾಗುತ್ತದೆ.

ಈ ನಾಯಿಕೆಯಲ್ಲೂ ಉತ್ತಮ, ಮಧ್ಯಮ, ಅಧಮ ಅಥವಾ ಸ್ವೀಯಾ, ಪರಕೀಯ, ಸಾಮಾನ್ಯವೆಂಬ ಬೇಧಗಳಿದ್ದು ಅದು ಈಕೆಯ ಅವಸ್ಥೆಗಳನ್ನು ಅವಲಂಬಿಸಿರುತ್ತದೆ. ಸಹಜವಾಗಿ ಉತ್ತಮ ನಾಯಿಕೆಯದ್ದು ಹೆಚ್ಚೇನೂ ಅಭಿನಯಕ್ಕೆ ಅವಕಾಶ ನೀಡದ ಆದರೆ; ಉನ್ನತ ಮಟ್ಟದ, ಗಂಭೀರ, ಮೃದು ವರ್ತನೆಯುಳ್ಳ ಭಾವಪ್ರಕಾಶ. ಮಧ್ಯಮವು ಮನುಷ್ಯ ಸಹಜ ಮಿಶ್ರ ಭಾವನೆಗಳ ಪ್ರತಿರೂಪ. ಅಧಮನಾಯಿಕೆಯು ನೀಚ ಇಲ್ಲವೇ ಭಾವನೆಯನ್ನು ಹಿಡಿತವಿರಿಸದೆ ಯಥಾಸ್ಥಿತಿಯಲ್ಲಿ ಹರಿಬಿಡುವ, ಅಥವಾ ಗೌರವಯುತ ನಡವಳಿಕೆಗಳ ಬದಲಾಗಿ ಎಂದಿನಂತೆಯೇ ಇದ್ದು ; ಅನೌಚಿತ್ಯಕರವಾಗಿ ಕಾಣಿಸಿಕೊಳ್ಳುವವಳು. ಸ್ವೀಯಾ ಅಂದರೆ ಪತಿಗೆ ನಿಷ್ಠಳಾದ ಪತ್ನಿ. ಪರಕೀಯಳು ಪತಿಯ ಹೊರತಾಗಿಯೂ ಇನ್ನೊಬ್ಬರಲ್ಲಿ ಅನುರಾಗ ಹೊಂದಿರುವವಳು, ಸಾಮಾನ್ಯೆಯು ವೇಶ್ಯೆಯೇ ಆಗಿರುತ್ತಾಳೆ. ಇಷ್ಟೇ ಅಲ್ಲದೆ ಅಷ್ಟವಿಧ ನಾಯಿಕೆ ಅಥವಾ ಮೇಲ್ಕಂಡ ಮೂವರು ಶೃಂಗಾರ ನಾಯಿಕೆಯರು ಮುಗ್ಧಾ, ಮಧ್ಯಾ ಮತ್ತು ಪ್ರಗಲ್ಭ ಸ್ಥಿತಿಯ ಪೈಕಿ ಯಾವುದಾದರೂ ಒಂದು ವರ್ಗಕ್ಕೆ ಸೇರಿರುವುದೂ ಇದೆ.

ಮುಗ್ಧಾ ನಾಯಿಕೆಯು ಮುಗ್ಧೆ, ಬಾಲ್ಯ ಯೌವನಗಳ ಸಂಧಿಕಾಲದಲ್ಲಿರುವವಳು. ಲಜ್ಜೆಯ ವರ್ತನೆ, ಅನುರಾಗದ ಕುರಿತಾಗಿ ಅಷ್ಟೇನೂ ಅರಿವಿಲ್ಲದ ಮೃದು ಸ್ವಭಾವದವಳಾಗಿರುತ್ತಾಳೆ. ಆಕೆಗೆ ಎಲ್ಲವೂ ಹೊಸತು, ಮೊದಲು. ಮಧ್ಯಾ ನಾಯಿಕೆಯು ಮುಗ್ಧಾಳಿಗಿಂತ ಕೊಂಚ ಹೆಚ್ಚಾದ ಅರಿವಿರುವ ಯೌವನಾವಸ್ಥೆ ವ್ಯಾಪಿಸಿರುವವಳು. ಹೆಚ್ಚು ಲಜ್ಜೆ ಮತ್ತು ಕಾಮವಿಕಾರವುಳ್ಳ ಈಕೆಯದ್ದು ಚಾತುರ್ಯಭರಿತ ವರ್ತನೆ. ಪ್ರಗಲ್ಭೆಗೆ ಕಾಮಾಸಕ್ತಿ ಹೆಚ್ಚು, ರತಿಕ್ರೀಡೆಗಳಲ್ಲಿ ಪ್ರವೀಣಳು. ಲಜ್ಜೆ ಅತೀಕಡಿಮೆ. ಇವುಗಳೊಳಗೂ ಧೀರ, ಅಧೀರ, ಧೀರಾಧೀರ ಹಾಗೂ ಜ್ಞಾತ, ಅಜ್ಞಾತ, ಪ್ರೌಢ, ನವೋಢ, ಲಘು, ಗುರುವೆಂಬ ಹಲವಾರು ಬೇಧಗಳಿದ್ದು; ಸುಮಾರು 50,220ರಷ್ಟು ನಾಯಿಕಾಬೇಧಗಳಿವೆ ಎಂದಿದ್ದಾರೆ ಪ್ರಾಜ್ಞರು!! ಒಟ್ಟಿನಲ್ಲಿ ನಾಯಿಕೆಯ ಸಂಸ್ಕಾರ–ವಯಸ್ಸು–ಸಾಮಾಜಿಕಸ್ಥಾನಮಾನ–ಸೌಶೀಲ್ಯದಿಂದ ಆಕೆಯ ವರ್ತನೆ ಮೃದುವೋ, ಕಟುವೋ, ಮಧ್ಯಮವೋ ಎಂಬುದು ನಿರ್ಧಾರವಾಗುತ್ತದೆ.

ಉದಾಹರಣೆಗೆ : ಉತ್ತಮ ಸ್ವಾಧೀನಪತಿಕೆಯು ಪ್ರಣಯ ಕುಂದಿಹೋದರೂ ಮರುಘಳಿಗೆ ಸಹಜವಾಗಿರುವವಳಾದರೆ; ಮಧ್ಯಮಳು ಕಲಹದ ಕಾರಣವನ್ನು ಕ್ಷಿಪ್ರವಾಗಿ ಅರಿತು ಪ್ರೇಮಿಯನ್ನು ಸಮಾಧಾನಪಡಿಸುತ್ತಾಳೆ. ಅಧಮಳು ಪ್ರೇಮಿಯೇ ತನ್ನನ್ನು ಸಮಾಧಾನಪಡಿಸಲು ಕಾದಿರುತ್ತಾಳೆ. ಅಂತೆಯೇ ಸ್ವೀಯಳಲ್ಲಿ ಉತ್ತಮ ಸ್ವಾಧೀನಪತಿಕೆಯು ಸಾಯುವ ತನಕವೂ ಪತಿಗೆ ಅನುಸಾರಳಾಗಿದ್ದರೆ; ಮಧ್ಯಮಳು ಪತಿಯ ಮನಸ್ಸು ಅನುಕೂಲವಾಗಿದ್ದರೆ ಅದರ ಅನುಸಾರವಾಗಿ ನಡೆದುಕೊಳ್ಳುವವಳಾಗಿರುತ್ತಾಳೆ. ಅಧಮಳು ಮನಸ್ಸಿನ ಬದಲಾವಣೆಯಿದ್ದರೂ ನಾಯಕನ ಬಳಿ ಇರುವವಳು. ಅದೇ ಪರಕೀಯಳಲ್ಲಿ ಉತ್ತಮಳು ತನ್ನ ಪ್ರೇಮಿಯನ್ನು ರಹಸ್ಯವಾಗಿರಿಸಿ ಕೊನೆಯ ತನಕವೂ ಪ್ರೇಮಿಯನ್ನು ಹೊಂದುವವಳು; ಮಧ್ಯಮಳು ತನ್ನ ಪ್ರೇಮಪ್ರಸಂಗ ಊರ ಮಾತಾಗುವಂತೆ ಮಾಡುತ್ತಾಳೆ. ಅಧಮಳಲ್ಲಿ ಚಪಲತೆ ಹೆಚ್ಚು. ಅಂತೆಯೇ ಸಾಮಾನ್ಯೆಯನ್ನೂ ವರ್ಗೀಕರಿಸಬಹುದು.

ಇಲ್ಲಿ ನೀಡಲಾಗಿರುವ ಶತಾವಧಾನಿ ಡಾ. ಗಣೇಶರ ಕಾವ್ಯ ಮತ್ತು ಮಂಟಪರ ಭಾವಾಭಿವ್ಯಕ್ತಿಯಲ್ಲಿ ನೀಡಲಾಗಿರುವ ನಾಯಿಕೆಯು ಉತ್ತಮ–ಮಧ್ಯಮ ಗುಣದ ಸಮ್ಮಿಶ್ರಣ ಹೊಂದಿರುವ ; ಸ್ವೀಯಾ, ಮಧ್ಯಾ, ಜ್ಞಾತ, ಪ್ರೌಢ ಸ್ವಭಾವವುಳ್ಳವಳು. ನರ್ತನದಲ್ಲಿ ಅಭಿನಯಕ್ಕೆ ಹೆಚ್ಚು ವಿಸ್ತಾರವನ್ನು ಕಲ್ಪಿಸಿಕೊಡುವ ಮತ್ತು ಜನಮಾದರಿಯ ಜೀವನದ ಆಯಾಮವಿರುವುದರಿಂದ; ಈ ಅಷ್ಟನಾಯಿಕಾ ಚಿತ್ತವೃತ್ತಿಯ ಹಾದಿಯಲ್ಲಿ ಮಧ್ಯಮನಾಯಿಕೆಯನ್ನೇ ಪ್ರಧಾನವಾಗಿ ಎಲ್ಲಾ ನಾಯಿಕೆಯರಿಗೂ ಅಳವಡಿಸಿ ಸಾಹಿತ್ಯವನ್ನು ನೀಡಲಾಗಿದೆ. ಧಾರವಾಢ ಆಕಾಶವಾಣಿಯ ಉದ್ಯೋಗಿ, ಕವಿ, ಯಕ್ಷಗಾನ ಅರ್ಥಧಾರಿ ದಿವಾಕರ ಹೆಗಡೆಯವರ ಕವಿತ್ವವು ಭೂಮಿ, ಪ್ರಕೃತಿ, ಮಳೆ, ಬಾನು ಇತ್ಯಾದಿ ಪ್ರಾಕೃತಿಕವಾಗಿ ನಿರೂಪಿಸಲ್ಪಟ್ಟ ಸೆಲೆಯನ್ನು ಹೊಂದಿದೆ. ಶರದ್ ಋತುವಿನಿಂದಾರಂಭಿಸಿ ಗ್ರೀಷ್ಮ ಋತುವಿನವರೆಗೆ ಭೂಮಿಯ ಮೇಲ್ಮೈಯಲ್ಲಾಗುವ ಬದಲಾವಣೆಗಳನ್ನೇ ನಾಯಿಕೆಯ ಅವಸ್ಥೆಗಳನ್ನಾಗಿಸಿ ಚಿತ್ರಿಸುವ ಕಾವ್ಯದಲ್ಲಿ 'ಮೇದಿನಿ' ಅಷ್ಟನಾಯಿಕಾ ಭಾವದಲ್ಲಿ ಮೇಘನಿಗಾಗಿ ಕಾಯುತಾಳೆ. ಭಾವಕ್ಕೆ ಒತ್ತಾಸೆಯಾಗಿ ನಿಲ್ಲುವ ಲಯಲಾಲಿತ್ಯ ಕಾವ್ಯಕ್ಕೆ ಹದ ನೀಡುವ ಪದಮೈತ್ರಿ ಇದರ ವಿಶೇಷ.

ಕಳೆದ ಒಂದು ವರುಷದಿಂದ ನಿಮ್ಮ ನಮ್ಮ ಕಲ್ಪನಾ ಸಾಮರ್ಥ್ಯ, ಅನುಭವ–ಅನುಭಾವ, ವಿಶ್ಲೇಷಣೆ, ನಾಟ್ಯದ ಆಯಾಮ, ಸವಾಲು–ಸಾಧನೆ, ಅಭಿವ್ಯಕ್ತಿಯ ಕ್ಷಿತಿಜ, ರಸದೃಷ್ಟಿ, ಕಾವ್ಯದೃಷ್ಟಿ ಮತ್ತು ಅರಿವಿನ ಹರಹುವಿನ ವಿಸ್ತಾರಕ್ಕೆ ವೇದಿಕೆಯಾಗಿರುವ ಈ ಅಷ್ಟನಾಯಿಕಾ ಚಿತ್ತವೃತ್ತಿ ಈ ಸಂಚಿಕೆಗೆ ಸಮಾಪ್ತಿಯಾಗುತಲಿದೆ. ಸಹಜ ಜೀವನಾನುಭವನ್ನೂ, ಆನಂದದ ನೆಲೆಯನ್ನೂ ಕಲೆಯ ಸಂಸ್ಪರ್ಶದೊಂದಿಗೆ ನೀಡುತ್ತಾ; ಪತ್ರಿಕೆಯ ಎಂಟು ಸಂಚಿಕೆಗಳುದ್ದಕ್ಕೂ ಈ ಅಂಕಣ ಬಹಳಷ್ಟು ಮಂದಿಗೆ ಅಪ್ಯಾಯಮಾನವಾಗಿತ್ತೆನ್ನುವುದಕ್ಕೆ ; ದಕ್ಕಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ಈ ಹಿನ್ನೆಲೆಯಲ್ಲಿ ಈ ಅಂಕಣದ ಯಶಸ್ಸಿಗೆ ಸಹಕರಿಸಿದ ಹಿರಿಯ ವಿದ್ವನ್ಮಣಿಗಳಿಗೆ ಅಭಾರಿಯಾಗಿರುತ್ತದೆ ನೂಪುರಬಳಗ.

ಪ್ರತೀ ನಾಯಿಕೆಗೂ ತನ್ನದೇ ಆದ ಭಾವಾನುಭಾವ ಸ್ಥಿತಿ ಸನ್ನಿವೇಶಗಳಿದ್ದರೂ ಅವೆಲ್ಲವೂ ಒಂದೇ ತಂತುವಿಗೆ ಹೆಣೆದವು ಎಂಬುದನ್ನು ಪ್ರತೀ ಸಂಚಿಕೆಗೂ ಕಂಡಿದ್ದೀರಿ. ಹಾಂ, ಹಾಗಾದರೆ ಮುಂದಿನ ಸಂಚಿಕೆಯಿಂದ ಮತ್ತಿನ್ನೇನು ಎಂದು ಆಲೋಚಿಸುತ್ತೀದ್ದೀರಾ? ಇಂತಹ ಅಷ್ಟನಾಯಿಕೆಯರ ಅಭಿವ್ಯಕ್ತಿಗೆ ಸರಿಸಮನೆಂಬಂತೆ ನಾಯಕರ ಗುಣಾವಗುಣಗಳ ಕುರಿತ ಕಾವ್ಯ, ವಿವರ–ವಿಶ್ಲೇಷಣೆಗಳು ನೂಪುರವನ್ನು ಸಮೃದ್ಧವನ್ನಾಗಿಸಲಿವೆ. ಇಂದಿನ ಸಂಚಿಕೆಯಲ್ಲಿ ನಾಯಿಕೆಯು ನಾಯಕನನ್ನು ಸೇರಿ ಸ್ವಾಧೀನಪತಿಕೆಯಾಗಲಿದ್ದಾಳೆ. ಆದರೆ ಮುಂದಿನ ಹಂತದ ಆವರ್ತನಕ್ಕೆ ನಾಯಿಕೆಯು ಅನುಭವಿಸಿದ ಭಾವಾನುಭಾವ ವಿಭಾವಗಳ ಸುಳಿಯ ಮಾದರಿಯಲ್ಲೇ ನಾಯಕ ಮಿಂದೇಳಲಿದ್ದಾನೆ.

ಸಾಮಾನ್ಯವಾಗಿ ನಾಯಕರ ಅಭಿವ್ಯಕ್ತಿ ನರ್ತನದಲ್ಲಿ ಅಷ್ಟು ಸುಸ್ಪಷ್ಟವಾಗಿ ತೋರಿಬರುವುದು ಕಡಿಮೆಯೇ ಸರಿ. ಆದ್ದರಿಂದ ಪತ್ರಿಕೆಯು ಈ ನಿಟ್ಟಿನಲ್ಲಿ ನರ್ತನದಲ್ಲಿ ಪುರುಷಾಭಿವ್ಯಕ್ತಿಗೆ ಹೆಚ್ಚಿನ ಪೋಷಣೆ ಮತ್ತು ವಿಸ್ತಾರವನ್ನಿತ್ತು ದೀವಟಿಗೆಯಾಗುವುದರೊಂದಿಗೆ ; ಪುರುಷ ಸಹಜ ಭಾವನೆಗಳಿಗೂ ಕನ್ನಡಿ ಹಿಡಿಯಲು ಪ್ರಯತ್ನಿಸಲಿದೆ. ಇದಕ್ಕೆ ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿರುವ ಶತಾವಧಾನಿ ಡಾ. ಆರ್. ಗಣೇಶರೇ ಮುಂದಿನ ಲಲಿತಲಹರಿಗೂ ಹೂರಣವನ್ನಿತ್ತಿದ್ದಾರೆ. ಕಾಯುತ್ತೀರಲ್ವಾ?

ಭಾಮಿನೀ

– ಶತಾವಧಾನಿ ಡಾ. ಆರ್. ಗಣೇಶ್

ಮಲಯಮಾರುತ ರಾಗ : ವಸಂತತಿಲಕ
ಬಾಲಾರ್ಕಭಾನುವಿನ ಪೊಂಬಿಸಿಲೀಗಳೀಗಳ್
ಪ್ರಾಲೇಯಬಿಂದುದಲಿತಾಂಬುಜರಾಜಿತೇಜೋ
ಲೀಲೋತ್ಸವಕ್ಕೊಸಗೆಯಾಗೆ ಸಮೀರಧೀರ
ಶ್ರೀಲಾಸ್ಯದಂತೆ ದಯಿತಂ ಸತಿಯತ್ತಲೊಲ್ದಂ ॥

ವಾಸಂತಿ ರಾಗ : ಮಾಲಿನೀ
ಹೃದಯರಸಿಕನಾಣ್ಮಂ ಬಂದು ಬೇಡಲ್ಕೆ ಬಳ್ಕು
ತ್ತೊದವಿದಮೃತಯೋಗಕ್ಕಾಂತು ಸಂತೋಷಬಾಷ್ಪಂ ।
ಪದೆಪಿನವನ ನರ್ಮೋತ್ಕರ್ಮಮಂ ಶರ್ಮದಿಂದಂ
ಪುದಿದು ಪಡೆವಳೀಗಳ್ ಕಾಂತವಾಲ್ಲಭ್ಯಮುಣ್ಮಲ್ ॥
(ಸೂರ್ಯೋದಯದ ವೇಳೆಗೆ ವಿನಮ್ರನಾಗಿ ಬಂದು ತನ್ನಲ್ಲಿ ನಲ್ಮೆಯನ್ನು ತೋರುವ ನಲ್ಲನನ್ನು ಕಂಡು ಆತನು ತನಗಿನ್ನು ಶಾಶ್ವತನರ್ಮನಾಯಕನೆಂದು ಗ್ರಹಿಸಿ ಅವನ ಪ್ರಣಯಾರಾಧನೆಯಲ್ಲಿ ಹಿಗ್ಗಿ ವೆಗ್ಗಳಿಸುವ ನಾಯಿಕೆಯೇ ಸ್ವಾಧೀನಪತಿಕೆ.)



ದೇಶ್, ಬೃಂದಾವನೀ, ಮಾರುಬಿಹಾಗ್, ಬಿಹಾಗ್, ಖಮಾಚ್, ಪಹಾಡೀ, ಬಹುದಾರಿ, ಮೋಹನಕಲ್ಯಾಣಿ, ಹಮೀರಕಲ್ಯಾಣಿ ರಾಗಗಳು– ಅಷ್ಟ, ಏಕ, ರೂಪಕ ತಾಳಗಳು
ಎನ್ನವನೇಂ ಚೆನ್ನನೋ– ಸಂಪನ್ನನೋ ।
ಮನ್ನಿಪುದೇಂ ಚೆನ್ನವೋ –ಸೌಜನ್ಯವೋ ॥ಪ॥

ಎನ್ನ ಮನೋರಥಪಥವನ್ನರಿವ –ನುರಿತವ
ನೆನ್ನ ಮನೋಗತಮತವಿನತ – ವಿನುತ ॥ಅ.ಪ॥

ಎನ್ನಯ ಕಂಗಳ ಕೊನೆಯಲಿ ಕುಣಿಯುವ
ನೆನ್ನಯ ಕುರುಳಿಗೆ ಬಿಗಿದುಳಿವ ।
ಬಿನ್ನಣ– ಬಿಂಕದ ಬಗೆಯನೆ ತಿಳಿಯದ
ಜೊನ್ನದ ಮನದವನಿವನೆರೆಯ ॥೧॥

ಗೀಚಿದ ಗೀಟನು ದಾಟದ ಬೇಟಿಗ
ನಾಚುವನನ್ಯೆಯ ನೋಡಲಿಕೆ ।
ದೋಚಿದನೆನ್ನಯ ಚೇತನವನ್ನಿವ
ನೇ ಚತುರಪ್ರಿಯ ಚಿತ್ತಜನೇ ॥೨॥

ಮಿಸುನಿಮೆಯ್ಮಾಟದ ಮೆಲ್ಲುಲಿಯಾಟದ
ನಸುನಗೆನೋಟದ ನಾಯಕನೇ ।
ಪೊಸಬಯಕೆಗಳೆಸೆವೊಸಗೆಯ ಪಸರಿಪ
ರಸಿಕಶಿಖಾಮಣಿ ಮೋಹನನೇ ॥೩॥

ಮಧ್ಯಮಾವತಿ ರಾಗ : ಕಂದಪದ್ಯ
ಇಂತಾ ಕಾಂತಾಮಣಿ ತಾಂ
ಸಂತತಮಾಂತರ್ಯವೇನತ್ತಂ ನಿಜಪತಿಯಿಂ ।
ಸಂತಾಪವೀತೆ ನಿಧುವನ
ಸಂತೋಷವಿಲಾಸೆ ಭಾಸೆ ನಲಮಂ ಗೆಲಿದಳ್ ॥೪॥

ಮೋಹನ ರಾಗ : ಶಾರ್ದೂಲವಿಕ್ರೀಡಿತ ವೃತ್ತ
ಶೃಂಗಾರಂ ಜಗತೀಮನಹರರಸಂ ಹೃದ್ಧರ್ಮಸಂಸ್ಕಾರಕಂ
ತುಂಗಾಂತಃಕರಣರ್ಗೆ ಕಂಗಳ ಸವಂ ಮಾಧುರ್ಯಧುರ್ಯಂ ಚಿರಂ ।
ಸಂಗೀತಾಯತನಂ ಸಮಸ್ತಹೃದುತ್ತಂಸರ್ಗೆ ಸರ್ಗೋಜ್ಜ್ವಲಂ
ಸಾಂಗಂ ರಾಗನಿರೂಪಿತಂ ರಸಫಲಂ ಭದ್ರಂ ಶುಭಂ ಮಂಗಳಂ ॥೫॥

ಮೇಘಮೇದಿನಿ

– ದಿವಾಕರ ಹೆಗಡೆ, ಧಾರವಾಡ

ಹೋ ಹೋ ಬಾನೊಡೆಯಿತು ಓಡಿ
ಆಹಾ ಏನದ್ಭುತ ನೋಡಿ
ಓಹೋ ಸಿಡಿಲಿನ ಹೊಸಮೋಡಿ
ಬಾ ಬಾ ನಲಿಯುವ ನಾವಾಡಿ

ನಿನ್ನಯ ಹಾಡಿಗೆ ನವಿಲಾಗಿದೆ ಮನ
ಚೆನ್ನಿಗ ಕುಣಿಯುವೆ ತಕಝುಣು ಎನ್ನುತ
ಹೊನ್ನ ಬೆಳಕ ಸೆಳೆಮಿಂಚಿನ ಪುಳಕ
ಕಣ್ಣ ಮುಚ್ಚಿಸಿತು ಸಿಡಿಲಿನ ನಡುಕ

ಬಣ್ಣಗಳೇಳರ ಬಾನಿನ ಎರಕ
ಸಣ್ಣ ಮಳೆಗೆ ಮೈ ತೋಯುವ ತವಕ
ಮಣ್ಣ ವಾಸನೆಗೆ ಮೂಗರಳಿಸು ಬಾ
ಕಣ್ಣ ಪ್ರೇಮದಲಿ ಕಾವಡಗಿಸು ಬಾ



ಇಳೆಗೆ ಜಳಕದ ಪುಳಕದೈಸಿರಿ ।
ಮಳೆಗೆ ಪ್ರೀತಿಯ ಎರಕವಾದುದು ।
ಕೆಳೆಗೆ ಹೊಳೆದುದು ನಳನಳಿಪ ಶೃಂಗಾರ ರಸವಾಗ ॥
ಕಳೆದು ವಿರಹವ ಧರಣಿ ತೋಷದಿ ।
ಮುಳುಗಿ ನಿಂದಳು ಮೇಘನೊಲವಲಿ।
ಬೆಳೆದ ಪ್ರೇಮದ ಪರಿಯು ಮೊಳೆಯಲಿ ಉಳಿಯಲೀ ಸಿರಿಯು ॥

ಭಾಮಿನಿಯ ಭಾವಾಭಿವ್ಯಕ್ತಿ

– ಮಂಟಪ ಪ್ರಭಾಕರ ಉಪಾಧ್ಯ

...ಅರೆ! ಇದೇನಿದು, ಮೆಟ್ಟಿಲ ಮೇಲೆ ನನ್ನವನು ಬೋರಲಾಗಿ ಮಲಗಿದ್ದ. ಇಟ್ಟ ಹೆಜ್ಜೆಯನ್ನು ಹಾಗೇ ಹಿಂದೆ ಇಟ್ಟೆ. ಒಂದು ಕ್ಷಣ ಹಾಗೇ ನಿಂತೆ. ಏನು ಮಾಡಲೂ ತೋಚಲಿಲ್ಲ. ಮತ್ತೆ ಪುನಾ ವಿಪ್ಲವ. ಓಡುತ್ತಿರುವ ಮನಸ್ಸನ್ನು ತಡೆದು ನಿಲ್ಲಿಸಿಕೊಂಡೆ. ಅವನ ನಿಶ್ಚಲವಾದ ನಿದ್ರೆ ನನ್ನನ್ನು ಸೆಳೆಯಿತು. ನಿದ್ರೆ ಮಾಡಿದ ಮಗುವಿನಂತೆ ಕಂಡಿತು. ಆದರೂ ಬಿಗುಮಾನ. ಬಾಗಿಲು ತಟ್ಟಿದೆ; ಕಾಲ್ಗೆಜ್ಜೆ ಸಪ್ಪಳ ಮಾಡಿದೆ; ಎಚ್ಚರ ಆಗಲಿಲ್ಲ. ಅವನ ನಿರ್ಜೀವತೆಯ ನಿದ್ರೆ ಕಂಡು ನನಗೆ ಹುಸಿಕೋಪ ಬಂತು. ಇಲ್ಲವಾಗಿದ್ದರೆ ನಾನು ಹೊರಗೆ ದಬ್ಬಿದ ಮೇಲೆ ರಾತ್ರಿ ಇಡೀ ಇಲ್ಲೇ ನಿದ್ರಿಸಿದನೆಂದಾಯ್ತು. ಬಾಗಿಲನ್ನಾದರೂ ತಟ್ಟಬಹುದಿತ್ತು. ಒಮ್ಮೆ ಕೂಗಿ ಕರೆಯಬಹುದಿತ್ತು. ನಾನು ಇಲ್ಲೇ ಇದ್ದೇನೆ ಎಂದು ಹೇಗಾದರೂ ಸೂಚಿಸಬಹುದಿತ್ತು. ಇವನ ಬಿಗುಮಾನಕ್ಕಿಷ್ಟು ಬೆಂಕಿಬಿತ್ತು ಎನ್ನಿಸಿತು. ಹೊರಗೆ ಚಳಿ– ನಾನು ಬೆಚ್ಚನೆ ಒಳಗೆ. ರಾತ್ರಿ ಎಲ್ಲ ವ್ಯರ್ಥವಾಗಿ ಪ್ರಲಾಪಿಸುವ ಅಗತ್ಯ ಇಲ್ಲವಾಗಿತ್ತು ಎಂಬ ಸಿಟ್ಟು. ಬಂದ ಸಿಟ್ಟನ್ನು ಬಲವಂತವಾಗಿ ಇಳಿಸಿಕೊಂಡೆ. ಚಳಿಯಲ್ಲೂ ನಿದ್ರೆ ಅನಿವಾರ್ಯ ಆಗಿತ್ತು ಆತನಿಗೆ. ಕಳೆದ ರಾತ್ರಿಯ ನನ್ನ ದಶಾವತಾರದ ಎದುರು ಇದೇ ಪರಮಸುಖ ಎಂದು ನಿರ್ಣಯಿಸಿದ್ದನೋ ಏನೋ, ಏನೇ ಇರಲಿ; ಅವನನ್ನು ಒಳಗೆ ಕರೆದುಕೊಂಡು ಹೋಗಬೇಕೆಂದು ನಿರ್ಣಯಿಸಿದೆ.

ಭಯ–ಭೀತಿ–ನಾಚಿಕೆಗಳಿಂದ ಅವನನ್ನು ಎಬ್ಬಿಸಲು ಮೆಯ್ ಮುಟ್ಟಿದೆ. ನಿಧಾನವಾಗಿ ಕಣ್ತೆರೆದು ನನ್ನನ್ನು ಕಂಡ. ನಿನ್ನೆ ರಾತ್ರಿ ಏನೂ ಆಗಿಲ್ಲದವನಂತೆ ಎದ್ದು ಮುಗುಳುನಗುತ್ತಾ ನನ್ನನ್ನು ಕಣ್ಣಲ್ಲೇ ಸೋಲಿಸಿದ. ಇನ್ನು ನಮ್ಮ ಹಗಲುವೇಷ ಹೊರಗಿನವರು ಕಂಡಾರು ಎಂದು 'ಒಳಗೆ ದಯಮಾಡು' ಎಂದು ಅಭಿನಯಿಸಿದೆ. ನನ್ನ ಅಭಿನಯಕ್ಕೆ ಆತ ಮಾರು ಹೋಗಲಿಲ್ಲ. ಆತನಿಗೆ ನನ್ನ ಸಹಜತೆ ಬೇಕಿತ್ತು. ಅಂತೂ ನಾನು ಸೋತೆ. ಅಲ್ಲಿ ಆತ ತನ್ನ ನಡವಳಿಕೆಯಿಂದ ಸೋಲಿಸಿದ. ನಾಚಿ ನೀರಾದ ನಾನು ನನ್ನ ಬಲಗೈಯನ್ನು ಮುಂದೆ ಮಾಡಿ ಮುಖವನ್ನು ತಿರುಗಿಸಿ ಕೆಳಗೆ ಹಾಕಿ ನಿಂತೆ. ನನ್ನ ಕೈಹಿಡಿದು ಅಮುಕಿದ. ನನ್ನಕಣ್ಣುಗಳು ಮಾತ್ರ ಚಲಿಸಿತು. 'ನೀನು ಚಲಿಸುವುದಿಲ್ಲವೇ ಅಥವಾ ನನ್ನನ್ನು

ಹೊರದಬ್ಬುತ್ತೀಯಾ' ಎಂದು ಮಾತನಾಡದೆ ಸ್ಪರ್ಶಾನುಭವದಲ್ಲೇ ಪ್ರಶ್ನಿಸಿದ. ಅದೇನಿದ್ದರೂ ನನ್ನ ಉತ್ತರ ಸಂಪೂರ್ಣ ಒಪ್ಪಿಗೆಯೇ ಆಗಿತ್ತು. ನಿಧಾನವಾಗಿ ಮುಖವನ್ನು ತಗ್ಗಿಸಿ ಒಳಗೆ ಹಜ್ಜೆ ಹಾಕಿದೆ. ಮದು ಮಗಳಂತೆ, ಸಪ್ತಪದಿ ಇಡುವಂತೆ. ಅಬ್ಬಾ ನಾನು ಬದುಕಿದೆ. ನನ್ನ ಪ್ರಾಣಪಕ್ಷಿ ಹಾರಿ ಹೋಗಿದ್ದು ಗೂಡು ಸೇರಿತು.

ವಿಷಾದದ ವಾತಾವರಣಕ್ಕೆ ನನಗೆ ಹೊಂದಿಕೊಳ್ಳಲು ಸಮಯ ಬೇಕಾಯ್ತು. ನಾಟಕ ನನಗೆ ಕೂಡದು. ಆದರೂ ಅನಿವಾರ್ಯವಾಗಿತ್ತು. ಸಹಜತೆಯ ಭಾವಪ್ರಕಟಣೆಗೆ ನಿನ್ನೆಯ ಘಟನೆಯ ಬಿರುಗಾಳಿ ಎದುರಾಗುತ್ತಿತ್ತು. ಯಾಂತ್ರಿಕವಾಗಿ ನೀರಿನ ತಂಬಿಗೆ ತಂದಿಟ್ಟೆ ಕಾಲ್ತೊಳೆಯಲು. ಆತನೋ ಅದನ್ನು ಮುಟ್ಟಲೇ ಇಲ್ಲ. ತಿಳಿಯಿತು. ಇನ್ನು ಮತ್ತೆ ರಗಳೆ ಆಗಬಾರದೆಂದು ನಾನೇ ಕಾಲು ತೊಳೆದೆ. ಭಾವನೆಗಳು ಹೆಪ್ಪುಗಟ್ಟಿ ಕೋಮಲತೆಯನ್ನು ಕಳೆದುಕೊಂಡಿದ್ದವು. ಸಿಟ್ಟಿನಲ್ಲೂ ಭಯಭಕ್ತಿ ಇದ್ದಿತು. ಕಾಲ್ತೊಳೆದ ನೀರನ್ನು ತಲೆಗೆ ಸಿಂಪಡಿಸಿಕೊಂಡೆ ನಿರ್ಭಾವದವಳಾಗಿ. ಮಂದಹಾಸದಿಂದ ಆತ ತಾನು ಗೆಂಡು ಎನ್ನುವಂತೆ ಕೆಣಕುತ್ತಿದ್ದ. ಬಗ್ಗಿದರೆ ಎರಡುಗುದ್ದು ಎನ್ನುವಂತೆ ಎಣಿಸಿದ ಈತನ ಚೆಲ್ಲುತನ ನನ್ನನ್ನು ಛೇಡಿಸಿತು. ಅದಕ್ಕೆ ಸ್ಪಂದಿಸಿದಂತೆ ಪಾದಗಳನ್ನು ನವಿರಾಗಿ ಚಿವುಟಿದೆ. ಯಾವ ಪ್ರತಿಕ್ರಿಯೆ ಇಲ್ಲದ ಮಂದಹಾಸದ ಆತನ ಶಾಂತರೂಪ ನನ್ನನ್ನು ಸೋಲಿಸಿತ್ತು. ನನ್ನ ಹೃದಯದ ಭಾವನೆಗಳನ್ನು ಒಮ್ಮೆಲೇ ಪ್ರಕಟಿಸಬೇಕೆಂಬ ಆತುರ ನನ್ನದು. ದಾರಿ ಕಾಣಿಸುತ್ತಲೇ ಇಲ್ಲವಾಗಿತ್ತು. ಆತನ ಪ್ರತಿಕ್ರಿಯೆಗಾಗಿ ಹಂಬಲಿಸಿದೆ. ಸೆರಗಿನಿಂದ ಕೃತಕವಾದ ಚಲನೆಗಳಿಂದ ಒತ್ತಿ ಒತ್ತಿ ಕಾಲೊರೆಸಿ ಭೂತದಂತೆ ಕುಳಿತೆ. ಇದ್ದಕ್ಕಿದ್ದಂತೆ ತಲೆಕುಟ್ಟಿ ಕಚಗುಳಿ. ಕತ್ತೆತ್ತಿ ನೋಡಿದರೆ ಪತಿರಾಯನದ್ದು ಹಾಲು ಬೇಕೆಂದು ಮೂಕಾಭಿನಯದ ಪ್ರದರ್ಶನ. ಬಿಸಿಬಿಸಿಯಾದ ಹಾಲನ್ನು ಬೆಳ್ಳಿಲೋಟದಲ್ಲಿ ತಂದಿಟ್ಟೆ. ಉಗುರುಬೆಚ್ಚಗಿನ ಹಾಲನ್ನು ತಣಿಸುವಂತೆ ನಟಿಸುತ್ತಾ ಉಫ್ ಉಫ್ ಎನ್ನುತ್ತಾ ನೀಡಿದೆ. ಎಷ್ಟೇ ಹೊತ್ತಾದರೂ ಕೈಯಿಂದ ಲೋಟ ಪಡೆಯಲಿಲ್ಲ. ತಿರುಗಿ ನೋಡಿದರೆ ಆತನೂ ಮೇಲೆ ನೋಡುತ್ತಲೇ ಇದ್ದ. ನಾನೇ ಕೈಯಾರೆ ಕುಡಿಸಬೇಕೆಂಬ ಸಂಕೇತ. ಈ ಸಂಕೇತ ಪ್ರೇಮಿಗಳಿಗೆ ತಿಳಿಯುವಂತಹದು. ಚಿಕ್ಕಮಕ್ಕಳ ಚೂಚಾಟದ ನೆನಪು ಬಂದು ಕಾರಣವಿಲ್ಲದ– ಅರ್ಥವಿಲ್ಲದ ಈ ನಾಟಕಕ್ಕೆ ಮಂಗಳ ಹಾಡಲು ಮುಂದಾದೆ.

ಹತ್ತಿರಬಂದು ಕುಳಿತೆ. ಅವನಿಗೆ ತಿಳಿಯದಂತೆ ಹಂತಹಂತವಾಗಿ ನಾನು ಸೋಲಿಸುತ್ತಲೇ ಇದ್ದೆ; ಅಥವಾ ಗೆಲ್ಲುತ್ತಿದ್ದೆನೋ ಏನೋ? ನಿಶ್ಶಬ್ದದಲ್ಲಿ ನನ್ನ ಉಸಿರೇ ಮೌನವನ್ನು ಮುರಿಯುವ ವಾದ್ಯದಂತೆ ಕೇಳಿಸುತ್ತಿತ್ತು. ನಿಧಾನವಾಗಿ ಹಾಲಿನ ಲೋಟವನ್ನು ಆತನ ತುಟಿಗೆ ಸ್ಪರ್ಶಿಸಿದೆ. ಪಕ್ಕನೆ ನನ್ನ ಕಂಡ ಕಣ್ಣುಗಳು ಎವೆಯಿಕ್ಕದೆ ಮಾತನಾಡುತ್ತಿತ್ತು. ಆತನ ನಾಲಗೆ ಹಾಲನ್ನು ಬಯಸುತ್ತಿತ್ತು. ನನ್ನ ಮನಸ್ಸು ನನಗರಿವಿಲ್ಲದೆ ಆತನಿಗೆ ಅಮೃತ ನೀಡಲು ಪ್ರಾರಂಭಿಸಿತ್ತು. ನಿನ್ನ ಅಧರಾಮೃತವನ್ನು ಪಡೆಯುವ ಶಕ್ತಿ ಇಲ್ಲ; ಅದನ್ನು ಪಡೆಯುವ ಶಕ್ತಿಗಾಗಿ ಈ ಹಾಲಿನ ಅಮೃತ ಪಡೆಯುತ್ತಿದ್ದೇನೆ ಎನ್ನುವಂತಿದ್ದವು ಆತನ ಕಣ್ಣುಗಳು. ಹಾಲನ್ನು ಆತ ಕುಡಿಯುತ್ತಿದ್ದರೂ ಆತನ ಅಧರಾಮೃತದ ಸವಿಯಂತೆ ನನ್ನ ತುಟಿಗಳು ಸವರಿಕೊಳ್ಳುತ್ತಾ ಆಸ್ವಾದಿಸುತ್ತಿದ್ದವು. ನನ್ನ ಪ್ರೀತಿಯು ಹಾಲಿನ ರೂಪದಲ್ಲಿ ಅವನ ಬಾಯೊಳಗೆ ಸೇರುವುದನ್ನು ಕಂಡೆ. ಆತನೂ ಹಾಗೆ; ಹಾಲು ಜೇನಾಗಿ, ಜೇನು ರಸವಾಗಿ ಆತನ ಮುಖದಲ್ಲಿ ಹೊರಸೂಸುವುದನ್ನು ಕಂಡೆ. ಕೊನೆಯ ಹನಿಯನ್ನೂ ಆತ ಬಿಡಲಿಲ್ಲ. ಅಹಂಕಾರ ಮರೆತು ಹಾಲು ಕುಡಿಯುವುದನ್ನು ಕಂಡಾಗ ಸುಪ್ತವಾಗಿದ್ದ ನನ್ನ ಅಹಂಕಾರವೂ ದೂರವಾಗಿ ಎರಡು ಹನಿ ಆನಂದಭಾಷ್ಪ ಕಣ್ಣಿನಲ್ಲಿ ಮಿಡಿಯಿತು.

ಏನನ್ನಿಸಿತೋ ಏನೋ, ನನ್ನ ಕೈಹಿಡಿದು ಸೆಳೆದು ನನ್ನನ್ನು ದಿಟ್ಟಿಸಲು ಮುಂದಾದ. ಮುಖ ಮುಚ್ಚಿಕೊಂಡು ತಿರುಗಿ ಕುಳಿತೆ. ತೋಳನ್ನು ಚಿವುಟಿದ. ತನ್ನ ಹೊಟ್ಟೆ ಮುಟ್ಟಿಕೊಂಡು 'ಹಸಿವು' ಎಂದ. 'ಮನೆಯಲ್ಲಿ ಏನೂ ಇಲ್ಲ. ಅಡುಗೆ ಮಾಡಿಲ್ಲ. ನೀನು ಬರುತ್ತೀ ಎಂದ ದಿನ ಎಲ್ಲಾ ಮಾಡಿದ್ದೆ. ಅದೆಲ್ಲಾ ಹಳಸಿತ್ತು'– ಹೀಗೆ ಅಭಿಪ್ರಾಯ ಸಾಗಿತ್ತು. ಆದರೆ ಎಲ್ಲೂ ಮಾತಿಲ್ಲ. ಅಭಿನಯದ ತರಬೇತಿಯಂತಿತ್ತು. 'ಅರೆ, ನೀನೇನು ಮಾಡಿಕೊಂಡಿದ್ದೀ, ಅದೇ ಸಾಕು ನನಗೆ' ಎಂಬ ಧೋರಣೆ ಅವನದ್ದು. ಆಗ ನನ್ನ ಪಾವಿತ್ರ್ಯ–ಸತ್ಯತೆ– ಪಾರದರ್ಶಕತೆ– ಸಹಜತೆಯನ್ನು ತಿಳಿಸುವ ಸಂದರ್ಭ ಬಂದಿತ್ತು. 'ನಾನೋ ಊಟಗೀಟ ಮಾಡಿಲ್ಲ. ನಿನ್ನ ಆಗಮನಕ್ಕಾಗಿ ಕಾಯುವುದರಲ್ಲೇ, ನಿರೀಕ್ಷೆಯಲ್ಲೇ

ಹಸಿವೆ ಕಾಣೇಸಿಲ್ಲವಾಗಿತ್ತು. ನಿನ್ನ ಸಾಮೀಪ್ಯದ ಗತಿ ಬದಲಾದಂತೆ ಹತಾಶಳಾಗಿ, ಉತ್ಸಾಹ ಕಳ ಕೊಂಡು, ತಣ್ಣೀರು ಕುಡಿದು, ಬಿಸಿಯಾದ ದೇಹದ ತಂಪಿಗೆ ತಣ್ಣೀರ ಪಟ್ಟಿ ಹೊಟ್ಟೆಯ ಮೇಲಿಟ್ಟು ಕೊಂಡೆ' ಎಂದು ನಿಸ್ತೇಜಳಾಗಿ ಒತ್ತರಿಸಿ ಬರುತ್ತಿದ್ದ ದುಃಖದಿಂದ ತತ್ತರಿಸಿ, ಬಿಕ್ಕಳಿಸಿ ಆತನ ತೊಡೆಯ ಮೇಲೆ ಬಿದ್ದೆ; ಅತ್ತೆ. ನನ್ನ ದುಃಖ ಇಳಿಯುವ ತನಕ ಆತನ ಸಹಾನುಭೂತಿ ನನ್ನ ಪಾಲಿಗೆ ಅವಿಸ್ಮರಣೀಯ ಕ್ಷಣ. ಅವನೊಳಗೆ ನಾನು ಸೇರಿಕೊಂಡೆ; ಅಲ್ಲ ನನ್ನೊಳಗೆ ಅವನು ಸೇರಿಕೊಂಡ. ಆತನಿಂದ ಸಾಂತ್ವನ. ನನ್ನ ತಲೆಗೂದಲನ್ನು ನೇವರಿಸಿ ಸಮಾಧಾನಿಸುತ್ತಿದ್ದ, ಮಾತಿಲ್ಲದೆ ತುಂಬಾ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತು ನನಗೆ. ಉತ್ತರವೂ ಬೇಕಾಗಿಲ್ಲ ಎನಿಸಿತ್ತು. ಹೆಣ್ಣಿಗೆ ಗಂಡು ಎಷ್ಟು ಆಧಾರ ಎನಿಸಿದ್ದೂ ನನಗೆ ಅದೇ ದಿನ, ಅದೇ ಕ್ಷಣದಲ್ಲಿ. ಹೆಣ್ಣಿನ ದೌರ್ಬಲ್ಯ ತಿಳಿದದ್ದು ಅಂದೇ, ಗಂಡಿನ ಅಧಿಕಾರದ ಪ್ರಾಬಲ್ಯ ಅರಿವೂ ಅಂದೇ ತಿಳಿಯಿತು. ಹೆಣ್ಣಿನ ಸೂಕ್ಷ್ಮ ಭಾವನೆಗಳು ಪ್ರಕಟವಾಗಬೇಕಾದರೆ, ಹೆಣ್ಣು ಹೆಣ್ಣೇ ಅಗಿ ಇರಬೇಕಾದರೆ ಗಂಡು ಗಂಡಾಗಿಯೇ ಇರಬೇಕೆಂದು ಒಪ್ಪಿದೆ. ಗಂಡಿನಂತೆಯೇ ಹೆಣ್ಣು ಸ್ವಾತಂತ್ರ್ಯವನ್ನು ಬಳಸಿಕೊಂಡಲ್ಲಿ ಅಥವಾ ಸಮಾನತೆಯ ಗುಂಗು ಹೊಂದಿದಲ್ಲಿ ಹೆಣ್ಣು ಹೆಣ್ಣಾಗಿರಲಾರಳು; ಹೆಣ್ಣಿನ ಸಹಜಸ್ವಭಾವದಿಂದ ವಂಚಿತಳಾಗುತ್ತಾಳೆ ಎಂದು ಅರಿತೆ. ಹೆಣ್ಣು ಹೆಣ್ಣಾಗಿಯೇ ಇದ್ದಾಗ, ಹೆಣ್ತನದಿಂದ ಗಂಡನ್ನು ಬಳಸಿಕೊಂಡಾಗ, ಗಂಡನ್ನು ಒಲಿಸಿ ಗಂಡಿನ ಗಂಡುತನವನ್ನು ಅನುಭವಿಸಿದಾಗ ಹೆಣ್ಣಿನ ಸ್ವಾರಸ್ಯ ಅರ್ಥವಾದೀತು. ಇಲ್ಲಿ ಸಮಾನತೆಗಿಂತ ಒಬ್ಬರಿಗೊಬ್ಬರು ಪೂರಕ ಎನ್ನುವುದು ಮಹತ್ತ್ವದ್ದು. ಪ್ರಕೃತಿ–ಪುರುಷನ ವಿಶಿಷ್ಟ ಅನುಭವ ನನ್ನ ಪಾಲಾಯ್ತು. ಇನ್ನು ನಾನು ಗೆಲ್ಲಬೇಕೆಂಬುದರಲ್ಲಿ ಅರ್ಥವಿಲ್ಲ ಎನ್ನುವುದರಲ್ಲೇ ನಾನು ಗೆದ್ದಿದ್ದೇನೆ. ತಾನು ಸೋಲುವುದರಲ್ಲೇ ಗೆದ್ದಿದ್ದಾನೆ ಆತ. ಇಬ್ಬರ ಸೋಲು–ಗೆಲುವು ಗೆಲುವಾಗುವುದಾದರೆ ಒಬ್ಬರನ್ನೊಬ್ಬರು ಹೊಂದಿಕೊಳ್ಳುವುದೇ ಬದುಕಿನ ಸಾರವೆಂದು ಗ್ರಹಿಸಿದೆ. ನನ್ನಲ್ಲಿ ಅತೀವವಾದ ಒಂದು ರೀತಿಯ ಸಂಸ್ಕಾರದ ಪ್ರಭಾವ ಉಂಟಾಯ್ತು. ಅಲ್ಲದೆ ಒಂದು ರೀತಿಯ ಪ್ರೌಢತೆ ಮೂಡಿತ್ತು. ಬದಲಾವಣೆಯ ಭಾವನೆಗಳಿಂದ ನನ್ನಲ್ಲೂ ನಡೆನುಡಿ ಬದಲಾಗಿತ್ತು. ಆತನಲ್ಲಿ ಪೂಜ್ಯತೆ ಕಂಡೆ; ಧನ್ಯಳಾದೆ.

ಇವುಗಳೆಲ್ಲಾ ನನಗರಿವಿಲ್ಲದೆ ನನ್ನನ್ನು ಆವರಿಸಿತ್ತು. ಹಸಿವೆ ಎಂದ ಆತನ ಮುಖ ಮರೆಯಲಾಗಲಿಲ್ಲ. ಮಗುವಿನಂತಹ ಮುಗ್ಧಮುಖದ ಆತನ ದೈನ್ಯ ಕಂಡು ಒಳಗೆ ಓಡಿದೆ. ದೇವರಿಗರ್ಪಿಸಿದ ಬಾಳೆಹಣ್ಣನ್ನು ತಂದೆ. ಯಾಂತ್ರಿಕವಾಗಿದ್ದ ನನ್ನ ಚಲನೆಗಳಲ್ಲಿ ಜೀವ ತುಂಬಿತ್ತು; ಭಾವ ಕರಗಿತ್ತು. ಸಿಪ್ಪೆಗಳನ್ನು ಸುಲಿಯುತ್ತಾ ನನ್ನ ಅಹಂಕಾರಗಳನ್ನು ತೊಡೆದೆ ಎಂಬ ಭಾವ ತಳೆದೆ. ಮಾಗಿದ ಪಕ್ವಗೊಂಡ ಹೆಣ್ಣಿನಂತೆ ಸಿಹಿಯಾಗಿದೆ ನನ್ನ ಮನಸ್ಸು ಎಂಬಂತೆ ಬಾಳೆಹಣ್ಣು ತಿನ್ನಿಸಿದೆ. ಯಾವುದೇ ಯೋಚನೆ–ಚಿಂತನೆ– ಅನುಮಾನ–ಜಿಜ್ಞಾಸೆ ಇಲ್ಲದೆ ತಿನ್ನುತ್ತಿರುವ ಆತನನ್ನು ಕಂಡಾಗ ನನ್ನ ಪ್ರೀತಿಯಲ್ಲೂ ಆತ ಹಾಗೆ ತಿಳಿದಿದ್ದಾನೆ ಎಂದು ಭಾವಿಸಿದೆ. ಆನಂದಾತಿರೇಕದಿಂದ ಉಳಿದರ್ಧ ಹಣ್ಣನ್ನು ಸುಲಿದೆ. ಸುಲಿದ ಸಿಪ್ಪೆಯನ್ನು ಆಡಿಸುತ್ತಾ ನಮ್ಮ ಬದುಕಿನ ಅಹಂಕಾರವೆಂಬ ಸಿಪ್ಪೆಯನ್ನು ಎಸೆಯೋಣವೆಂದು ಎಸೆದೆ. ಉಳಿದರ್ಧ ಹಣ್ಣನ್ನು ಕಲಾತ್ಮಕವಾಗಿ ಕೈಯ್ಯಲ್ಲಿ ಹಿಡಿದು ನಾಚಿ ನೀರಾಗಿ ಮುದ್ದೆಯಾಗಿ ತಲೆತಗ್ಗಿಸಿ ಕೈಯೆತ್ತಿ ಹಣ್ಣನ್ನು ನೇರವಾಗಿ ಅವನ ಬಾಯಿಯತ್ತ ತಿರುಗಿಸಿದೆ. ಎತ್ತಿದ ನನ್ನ ಕೈಯನ್ನು ತಡೆಹಿಡಿದ. 'ಏಕೆ' ಎಂದು ಪ್ರಶ್ನಿಸಿದೆ. 'ಅರ್ಧ ನಿನಗೆ' ಎಂದ. 'ಬೇಡ' ಎಂದೆ. ಒತ್ತಾಯಿಸಿದ; ಬಲವಂತಪಡಿಸಿದ. 'ನೀನು ಚೆನ್ನಾಗಿರು' ಎಂದೆ. ಒಂದು ಹಣ್ಣನ್ನು ಹಂಚಿ ತಿನ್ನೋಣವೆಂದು ಬಲವಂತದಿಂದ ನನ್ನ ಬಾಯಿಗೆ ತುರುಕಿದ. ನನಗಂತೂ ದುಃಖದ ಕಟ್ಟೆ ಒಡೆಯಿತು.

ನಾನು ಕರಗಿ ಕರಗಿ ಹೋದೆ. ಒಂದೇ ಹಣ್ಣು ಇಬ್ಬರಿಗೂ ಎನ್ನುವ ನಿನ್ನ ತತ್ತ್ವ ನಮ್ಮ ಜೀವನಕ್ಕೆ ಬರಲಿಲ್ಲವಲ್ಲಾ' ಎಂದು ಇನ್ನೊಂದು ಹೆಣ್ಣನ್ನು ಹೆಸರಿಸದೆ ಸೂಕ್ಷ್ಮವಾಗಿ ತಿಳಿಸಿದೆ. ಹಳೆಯದನ್ನು ಕೆದಕಬಾರದು ಎಂದು ಎಷ್ಟೇ ಪ್ರಯತ್ನಿಸಿದರೂ ಸಂದರ್ಭ ಹಾಗೆ ಮೂಡಿಬಂತು. ಆಗ ಅತ ಅದನ್ನು ಎಷ್ಟು ಸರಳವಾಗಿ ತೆಗೆದುಕೊಂಡನೆಂದರೆ 'ಓಹೋ ಅದಕ್ಕೆ ಇಷ್ಟೆಲ್ಲಾ ರಾದ್ಧಾಂತವೇ? ಅಯ್ಯೋ ಪೆದ್ದೀ.. ಪ್ರೀತಿ ಎನ್ನುವುದು ಒಬ್ಬರಿಗೇ; ಅದು ನಿನಗೆ ಮಾತ್ರ. ನೀ ಕಂಡದ್ದೆಲ್ಲಾ ಸತ್ಯ ಅಲ್ಲ. ನಿನ್ನ ಪ್ರೀತಿಯೇ ನನ್ನ ಜೀವ. ಕಣ್ಣಿನಿಂದ ಕಂಡಿರುವುದೆಲ್ಲಾ ಸತ್ಯವಲ್ಲ. ಒಳಗಣ್ಣು ಕುರುಡಾದಾಗ ಹೊರಗಣ್ಣು ಪ್ರಮಾಣವಾಗುತ್ತದೆ. ಆ ಬಡತನ ನಿನಗಿಲ್ಲ. ಒಳಗಣ್ಣು ತೆರೆದುನೋಡು. ಪ್ರೀತಿಯನ್ನು ನೋಡಲು ಹೃದಯದ ಕಣ್ಣು ಮುಖ್ಯ. ಅದನ್ನು ಕುರುಡು ಮಾಡಿಕೊಳ್ಳಬೇಡ'.. ಇನ್ನೂ ಏನೇನೋ ಹೇಳುತ್ತಲೇ ಇದ್ದ. ನಾನು ಬೆಪ್ಪುತಕ್ಕಡಿ ಆಲಿಸುತ್ತಲೇ ಇದ್ದೆ. 'ನಿನಗೆ ನಂಬಿಕೆ ಬೇಕಿದ್ದರೆ ಪ್ರಮಾಣ

ಮಾಡುತ್ತೇನೆ' ಎಂದ. ಅದೇ ಮಾತಿಗೆ ಕಟ್ಟುಬಿದ್ದೆ. 'ಸತ್ಯವಾಗಿ ದೇವರಾಣೆ' ಎಂದು ಕೈಯ ಮೇಲೆ ಭಾಷೆ ಕೊಟ್ಟ; ಕುತ್ತಿಗೆ ಮುಟ್ಟಿ ತಿಳಿಸಿದ. ತಲೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿ ರಮಿಸುತ್ತಲೇ 'ನೀನೊಬ್ಬಳೇ ನನಗೆ ಪ್ರೀತಿಪಾತ್ರಳು' ಎಂದ. ಆತನ ಕೈಯ ಸ್ಪರ್ಶ, ನಿಶ್ಚಲವಾದ ಆತನ ಮಾತಿನ ಗಟ್ಟಿತನ ಇವುಗಳೆಲ್ಲಾ ನನ್ನ ಪಾಲಿಗೆ ನಂಬಿಕೆ–ಹರ್ಷವೆರಡೂ ಆಯ್ತು.

ಆತನ ಕೈಯನ್ನು ನಾನಾಗಿಯೇ ಸ್ಪರ್ಶಿಸಿದೆ. ಈ ಸ್ಪರ್ಶದಲ್ಲಿ ಒಪ್ಪಿಗೆ ಇತ್ತು ; ಕ್ಷಮೆ ಇತ್ತು ; ಬಯಕೆ ಇತ್ತು; ಸಾಂತ್ವನ ಇತ್ತು ; ಹತ್ತು ಹಲವು ಭಾವಗಳ ತೀವ್ರತೆಯಿತ್ತು. ಗಟ್ಟಿಯಾಗಿ ಆತನ ಕೈ ಹಿಡಿದುಕೊಂಡೆ. ನೀನು ನನಗೊಬ್ಬನಿಗೇ ಸೇರಿದವನೆಂದು ಬಿಗಿದು ಹಿಡಿದು ನಿಂದೆ. ನಾನು ಗೆದ್ದೇ ಗೆದ್ದೆನೆಂದು ಚಂಗನೆದ್ದು ಹಾರಿದೆ. ಕನಸಲ್ಲವೆಂದು ಮನದಟ್ಟು ಮಾಡಿಕೊಂಡೆ. ನನ್ನವನನ್ನು ಓರೆನೋಟದಿಂದ ಕಂಡೆ. ಮಂದಹಾಸದಿಂದ ಠೀವಿಯಲ್ಲಿ ಕುಳಿತವನನ್ನು ಕಣ್ತುಂಬ ಕಂಡೆ; ಕಣ್ಣಲ್ಲಿ ತುಂಬಿಕೊಂಡೆ. ಎಲ್ಲೆಲ್ಲೂ ನನ್ನವನನ್ನೇ ಕಂಡೆ. ಪ್ರಪಂಚದಲ್ಲಿ ನನ್ನನ್ನು ಅರ್ಥಮಾಡಿಕೊಂಡವನು ಇವನೊಬ್ಬನೇ ಎಂದು ಅನಿಸಿತು. ಹೆಂಡತಿಯನ್ನು ಅರ್ಥಮಾಡಿಕೊಂಡ ಗಂಡುಗಳಲ್ಲಿ ನನ್ನವನೇ ಪ್ರಥಮ ಎಂದೆ. ನನ್ನವನು ದೇವನಂತೆ ಕಂಡ; ಮನ್ಮಥನಂತೆ ಕಂಡ; ಹಿರಿಯನಂತೆ ಕಂಡ; ಮಗುವಿನಂತೆ ಕಂಡ; ನನ್ನನ್ನು ನಡೆಸಿಕೊಂಡು ಹೋಗುವ ಗುರುವಿನಂತೆಯೂ ಕಂಡ. ನಾನು ಅವನನ್ನು ಅರ್ಥಮಾಡಿಕೊಂಡೆನೇ ಅಥವಾ ಅವನೇ ನನ್ನನ್ನು ಅರ್ಥಮಾಡಿ ಕೊಂಡನೇ? ಒಂದೂ ತಿಳಿಯಲಿಲ್ಲ. ನನಗೀಗ ಅದು ಬೇಕಾಗಿಯೂ ಇಲ್ಲ. ನನಗಾಗಿ ಅವನು, ಅವನಿಗಾಗಿ ನಾನು– ಇವಿಷ್ಟೇ ನಾನು ಬಯಸುವ ಪ್ರಪಂಚ.ಆ ಪ್ರಪಂಚ ಇದೀಗ ನನ್ನ ಕೈಗೆ.

ಹಿಂದಿನ ಕಹಿನೆನಪು–ಮುಂದಿನ ಸವಿನೆನಪು ಯಾವುದೂ ನನ್ನನ್ನು ಕಾಡುತ್ತಿಲ್ಲ. ನನಗೀಗ ಆತನ ಸಾಮೀಪ್ಯವೇ ಜೀವ; ಪ್ರಾಣ. ಇಲ್ಲಿ ಬಯಕೆಗಳಿಲ್ಲ; ವೇದನೆಗಳಿಲ್ಲ. ಇರುವುದು ಇಂದೇ; ಆನಂದ. ಈ ಆನಂದದ ಕ್ಷಣವನ್ನು ಹೆಚ್ಚುಹೊತ್ತು ಉಳಿಸಿಕೊಳ್ಳಲು ವಿನೋದ ಬೇಕು; ಪೂಜೆ ಬೇಕು; ಸಮರ್ಪಣೆ ಬೇಕು; ಅದಕ್ಕೆ ಸಿದ್ಧಳಾದೆ. ಆತನ ಕೈ ಹಿಡಿದು ಬಾವಿಕಟ್ಟೆ ಕಡೆಗೆ ಹೊರಟೆ. ತಿರುಗಾಟದಲ್ಲಿದ್ದ ಆತನನ್ನು ಸ್ನಾನಮಾಡಿಸಲು ಮುಂದಾದೆ. ಕೊಡದ ಬಾಯಿಗೆ ಉರುಳು ಸುತ್ತಿ ನೀರಿಗಿಳಿಸಿದೆ. ಆತನೊಂದಿಗೆ ಹರಟುತ್ತಾ ನೀರು ಸೆಳೆಯುವಾಗ ನನ್ನ ಲಯ ತಪ್ಪಿತು. ಕಾರಣ ಆತನೂ ಕೈಗೂಡಿ ನೀರು ಸೆಳೆದಿದ್ದ. ಬೊಗಸೆ ಬೊಗಸೆಯಾಗಿ ನೀರು ಎರಚಿ ಸ್ನಾನ ಮಾಡಿಸಿದೆ. ಆತನ ಕಿರುಚೇಷ್ಟೆಗಳಿಂದ ನಾನು ಉನ್ಮತ್ತಳಾಗಿದ್ದೆ. ತನ್ನ ತುಂಟತನವನ್ನು ಪ್ರಕಟಿಸುತ್ತಿದ್ದ. ನಮ್ಮೀರ್ವರ ಚಕ್ಕಂದದ ಗಲಾಟೆ ನೋಡಿ ಪಕ್ಕದ ಮನೆಯ ಗೆಳತಿ ಇಣುಕಿದಳು. ನೀರವತೆಯ ನಮ್ಮ ಮನೆಯಲ್ಲಿ ಇದ್ದಕ್ಕಿದ್ದಂತೆ ಉಂಟಾದ ಕುಲುಕುಲು ಆಕೆಗೆ ಅನುಮಾನ ತಂದಿತ್ತು. ಆಗ ಈತನೋ ಮುದುಡಿ ಕುಳಿತಿದ್ದ. ಆತನಿಗೆ ಸೆರಗು ಅಡ್ಡ ಹಿಡಿದಿದ್ದೆ. ಕೆಳಗಿನಿಂದಲೇ ಕೀಟಲೆ ಮಾಡುತ್ತಿದ್ದ. ಆಕೆಗೆ ಹೀಗೆ ಗಾಳಿಗೆ ಸೀರೆ ಒಣಗಿಸುತ್ತಿದ್ದೇನೆಂದು ತಿಳಿಸಿದೆ; ಹಾಲು ಉಕ್ಕಿರಬಹುದೆಂದು ಸೂಚಿಸಿ ಆಕೆಯನ್ನು ಒಳಗೆ ಕಳಿಸಿದೆ. ನನ್ನವನಿಗೆ ಇದರ ಪರಿವೆಯೇ ಇಲ್ಲದೆ ನನ್ನನ್ನು ಮುಜುಗರಕ್ಕೆ ಒಳಪಡಿಸುತ್ತಿದ್ದ. ಈ ಗಂಡುಗಳೇ ಹಾಗೆ. ಚರ್ಮ ದಪ್ಪ ಎಂದು ಆತನ ತಲೆ ಮೇಲೆ ಬಟ್ಟೆ ಇಟ್ಟು ಕ್ಷಣದಲ್ಲೇ ಆತನನ್ನು ಒಳಗೆ ಎಳೆದುಕೊಂಡು ಬಂದೆ.

ಆತನ ಹಸಿವೆ ನೀಗಿಸಲು ಸುಲಭದ ತಿಂಡಿಗಾಗಿ ಸಿದ್ಧಳಾದೆ. ರೊಟ್ಟಿ ಕಾಯಿಸಲು ಮುಂದಾದೆ. ಆತನ ಸಹಕಾರ, ಕೀಟಲೆ ಎಲ್ಲವೂ ತೊಡಕಾದರೂ ನನ್ನ ಪಾಲಿಗೆ ಉಲ್ಲಾಸಕರವಾಗಿತ್ತು. ಎಲ್ಲವೂ ಸಿದ್ಧವಾದ ಮೇಲೆ ಆತನನ್ನು ಕುಳ್ಳಿರಿಸಿ ತಿನ್ನಿಸುವುದಕ್ಕೆ ಮುಂದಾದೆ. ನನ್ನ ಕೈಯಲ್ಲಿಯ ತಿಂಡಿ ತಿನ್ನಲು ಆತ ಹಪಹಪಿಸುವುದನ್ನು ಕಂಡಾಗ ಹೊಟ್ಟೆ ತುಂಬಿ ಬಂತು. ನನ್ನ ಪಾಲಿಗೆ ಮಗುವಿನಂತೆ ಕಂಡ. ಮಾತೃವಾತ್ಸಲ್ಯದ ನವಿರಾದ ಭಾವ ಮೂಡಿ ಕಣ್ಣು ತುಂಬಿ ಬಂತು. ಪ್ರೀತಿಯ ಒತ್ತಡ ಹೆಚ್ಚಾಗಿ ಮೇಲಿಂದ ಮೇಲೆ ತಿಂಡಿ ನೀಡಿ, ಗಂಟಲು ಕಟ್ಟಿದಾಗ ನೀರು ಕುಡಿಸಿ ತಲೆ ಬಡಿದೆ, ಎದೆ ನೇವರಿಸಿದೆ. ಆತನ ಹೊಟ್ಟೆ ತುಂಬಿ ಧನ್ಯತೆಯನ್ನು ಪ್ರಕಟಿಸಿದ. ನಾನೂ ಧನ್ಯಳಾದೆ.

ನನ್ನ ಸೇವೆಯಿಂದ ಸಂತುಷ್ಟನಾದ ಆತ ನನ್ನ ಜಡೆ ಹಿಡಿದು ನಿಧಾನವಾಗಿ ಎಳೆದು ಬಿಡಿಸಿ ತಲೆಗೂದಲನ್ನು ಬಾಚಿ ಹೆಣೆದ. ನನ್ನ ಅಲಂಕಾರ ಮಾಡಲು ಮುಂದಾದ. ತಾನು ತಂದಿರುವ ಆಭರಣಗಳನ್ನು ತೊಡಿಸಿದ. ಪ್ರೀತಿಯ ಸಂಕೇತವಾಗಿ ತನ್ನ ಕೈಯಲ್ಲಿನ ಉಂಗುರ ತೊಡಿಸಲು

ಮುಂದಾದ. ಆದರೆ ಅದು ಬಿಗಿಯಾದಂತಿತ್ತು. ಎಣ್ಣೆ ಸವರಿ ಉಂಗುರ ತೊಡಿಸಿದ. ಆಗ ಆತ ಕೆನ್ನೆ ಸವರಿ ದಪ್ಪವಾಗಿದ್ದೀಯ ಎಂದು ಪ್ರಶ್ನಿಸಿದ. ದೆಪ್ಪಕ್ಕೆ ಕಾರಣ ನೆನೆದೆ; ನಾಚಿ ನೀರಾದೆ. ನನ್ನ ಭಾವಾನುರಾಗದ ಗೊಂದಲ ಆತನನ್ನು ಕಸಿವಿಸಿ ಮಾಡಿಸಿತು. ಪ್ರಶ್ನಿಸಿದ; ಮತ್ತೂ ನಾಚಿದೆ. ಕೈ ಅಮುಕಿದ. ಆಗ ಆತನ ಕೈಯನ್ನು ಹೊಟ್ಟೆಯ ಮೇಲೆ ಆಡಿಸುತ್ತಾ ಮುಖವನ್ನು ತಗ್ಗಿಸಿ ಇನ್ನೊಂದು ಕೈಯಿಂದ ಮೂರು ಬೆರಳುಗಳನ್ನು ಎತ್ತಿ ತೋರಿಸುತ್ತಾ 'ನಾನು ಮೂರು ತಿಂಗಳ ಗರ್ಭಿಣಿ' ಎಂದು ಸೂಚಿಸಿದೆ. ಆಗ ಆತ ನನ್ನನ್ನು ಅಪ್ಪಿಮುದ್ದಾಡಿ ಎತ್ತಿ ಹಾರಿದ. ಭಯಗೊಂಡ ನಾನು ಆತನನ್ನು ಆಲಿಂಗಿಸಿ ಕಣ್ಣು ಮುಚ್ಚಿಕೊಂಡೆ. ಆತ ನನ್ನ ಹೊಟ್ಟೆಯ ಮೇಲೆ ಮುಖವನ್ನಿಟ್ಟುಕೊಂಡು ತನ್ನ ಕನಸುಗಳನ್ನು ಕಾಣುತ್ತಿದ್ದ.

ಸಂತೋಷದ ಅಮಲಿನಲ್ಲಿ ನನ್ನನ್ನು ಶೃಂಗರಿಸಲು ಮುಂದಾದ. ನನ್ನ ಮೈಗೆಲ್ಲಾ ಅತ್ತರು ಬಡಿದು ಪನ್ನೀರು ಸಿಂಪಡಿಸಿದ. ಕೈಗೆ– ಕಾಲಿಗೆ ಬಣ್ಣದ ಚಿತ್ತಾರ ಮೂಡಿಸಿದ. ಕಿರುಗೆಜ್ಜೆ ಕಟ್ಟಿದ. ತಾನೇ ತಂದ ಹೂಗಳನ್ನು ಮುಡಿಸಿದ. ಕಣ್ಣಿಗೆ ಕಪ್ಪಿಟ್ಟ. ದೃಷ್ಟಿಯಾಗದಿರಲಿ ಎಂದು ದೃಷ್ಟಿಬೊಟ್ಟು ಇಟ್ಟ. ನನ್ನನ್ನು ಮದುಮಗಳ ರೀತಿಯಲ್ಲಿ ಶೃಂಗರಿಸಿದ. ನನ್ನನ್ನು ಉನ್ಮಾದಗೊಳಿಸಿದ. ನಾನು ಹಾಡಿದರೆ ಕುಣಿದ. ನಾನು ಕುಣಿದರೆ ತಾಳ ಹಾಕಿದ. ತಾಳ ಹಾಕಿದರೆ ವಾದ್ಯ ಬಾರಿಸಿದ. ನನ್ನ ಒಟ್ಟಿಗೇ ಅಭಿನಯಿಸಿದ. ವ್ಹಾ ! ನಾನಿಟ್ಟ ಹಜ್ಜೆ ಹಜ್ಜೆಗೂ ಸ್ಪಂದಿಸಿದ. ಫಲ ನೀಡಿದ. ನನ್ನನ್ನು ಪುಟಿಯುವಂತೆ ಮಾಡಿದ ಚೇತನ ಆತನಲ್ಲಿ ಇದ್ದರೂ ಸ್ವಲ್ಪವೂ ಬಿಂಕವಿಲ್ಲದೆ ಇರುವ ಆತನನ್ನು ಕಂಡೆ. ನನ್ನನ್ನು ವಶೀಕರಿಸಿಕೊಳ್ಳುವ ಶಕ್ತಿ ಇದ್ದರೂ ಎಲ್ಲಿಯೂ ಆತ ಗೆಲ್ಲಲು ಪ್ರಯತ್ನಿಸದೆ ಗೆಲ್ಲುತ್ತಿದ್ದ.

ನಾನು ಹಾಕಿದ ಗೆರೆ ದಾಟಲಾರದ; ಇನ್ನೊಂದು ಹೆಣ್ಣಿನ ಪ್ರಸ್ತಾಪ ಬಂದರೆ ಸಂಕೋಚಪಡುವ; ನನ್ನ ಬಯಕೆಗಳನ್ನು ಅಲೆಅಲೆಯಾಗಿ ಎಬ್ಬಿಸುವ ಮೋಹಕಶಕ್ತಿ, ನನ್ನ ಸಂಪೂರ್ಣ ಹೆಣ್ತನವನ್ನು ಧಾರೆಧಾರೆಯಾಗಿ ಅರ್ಪಿಸುವಂತಹ ಕಾಂತಶಕ್ತಿ ನನ್ನ ಕಾಂತನಲ್ಲಿ ಕಂಡೆ. ಉನ್ಮಾದದ ಅಮಲಿನಲ್ಲಿ ನಾನೂ ಹಾಡಿದೆ; ನರ್ತಿಸಿದೆ. ಅಬ್ಬಾ! ದ್ವಂದ್ವ ನರ್ತನಕ್ಕೂ ಆತ ಸಿದ್ಧನಾದ. ನಿಜಕ್ಕೂ ಧನ್ಯಳಾದೆ. ನನ್ನಂತಹ ಧನ್ಯತೆ ಜಗತ್ತಿನ ಇನ್ನಾವ ಹೆಣ್ಣಿಗೂ ಲಭಿಸಿರಲಾರದು ಎಂಬ ಹೆಮ್ಮೆಯೂ ಬಂತು ನನಗೆ. ಇನ್ನು ತಡೆಯಲಾಗಲಿಲ್ಲ. ನನ್ನ ತೀವ್ರತೆ ಹೆಚ್ಚಾದಂತೆ ಆತನ ಸಾಮೀಪ್ಯದ ಹಂಬಲ ಹೆಚ್ಚಾಯ್ತು. ಆತನನ್ನು ಬಿಟ್ಟಿರಲಾರದ ತುಡಿತ ಹೆಚ್ಚಾಯ್ತು. ಆತನನ್ನು ಪಡೆಯುವಲ್ಲಿ ಆತನ ಕೈ ಹಿಡಿದೆ; ಕುಣಿ ಯುತ್ತಲೇ ಕೈಹಿಡಿದೆ. ಭಾವಾತಿರೇಕದಿಂದ ಅಪ್ಪಿದೆ, ಆನಂದಿಸಿದೆ, ಆತನಲ್ಲಿ ಒಂದಾದೆ; ಆತನಲ್ಲಿಯೇ ನಾನು ನನ್ನನ್ನು ಕಂಡೆ. ನನ್ನವನಲ್ಲದೆ ಇನ್ನಾರಲ್ಲೂ ನಾನು ನನ್ನನ್ನು ಕಾಣಲಾರೆ ಎಂಬ ಸತ್ಯ ಅರಿತೆ. ನಾನು ನನ್ನತನವನ್ನೇ ಕರಗಿಸಿಕೊಂಡೆ. ಬದುಕಿನ ಆ ಸುಂದರ ಕ್ಷಣವೊಂದಕ್ಕಾಗಿ ಬದುಕನ್ನೂ, ಬದುಕಿನ ಕಹಿಯನ್ನೂ ಮರೆಯುವ ಸಿದ್ಧಿ ಪಡೆದೆ. ನಾನೇ ಗೆದ್ದೆ; ಸೋತು ಗೆದ್ದೆ. ಗೆಲುವಿನ ತಂತಿ ಮೀಟಿ ಪ್ರೀತಿಯ ರಾಗ ಹಾಡಿದೆ. ಆಗಲೇ ಉದಯರಾಗ ಪ್ರಾರಂಭವಾಗಿತ್ತು. ಬದುಕಿನ ಇನ್ನೊಂದು ಹಜ್ಜೆಗೆ ಅಣಿಯಾಗಲು ಅನುಭವದ ಶ್ರುತಿ ಆಗಲೇ ಶ್ರುತಿಗೊಂಡಿತ್ತು. ಆಗಲೇ ನಾನು ಭಾಮಿನಿಯಾದೆ.

–ಮುಗಿಯಿತು–

ನಮ್ಮ ಬಳಗದಲ್ಲಿ ಮತ್ತಷ್ಟು ಮಂದಿ ಸೇರ್ಪಡೆ

* **ಪ್ರಾಚಾರ್ಯರು ಮತ್ತು ಸಿಬ್ಬಂದಿವರ್ಗ, ಹಿರಿಯಡ್ಕ ಕಾಲೇಜು, ಉಡುಪಿ.**
* **ಕಪಿಲಾ ಶ್ರೀಧರ್,** ಮನಃಶಾಸ್ತ್ರಜ್ಞರು, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಬಳಿ, ಜಯನಗರ, ಬೆಂಗಳೂರು.
* **ಡಾ. ರಾಧಿಕಾ ರಂಜಿನಿ,** ಅತಿಥಿ ಉಪನ್ಯಾಸಕರು, ಪ್ರದರ್ಶಕ ಕಲೆಗಳ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ.

ನರ್ತನ ಸುರಭಿ

ನೃತ್ತ–ನೃತ್ಯ ಕಲಿಕೆಯಲ್ಲಿ ರಸದ ಪಾಠ...

ನೂಪುರ ಭ್ರಮರಿ ನೃತ್ಯ ಸಂಶೋಧಕರ ಒಕ್ಕೂಟದ ಕ್ರಿಯಾಶೀಲ ಸದಸ್ಯೆ, ಬೆಂಗಳೂರಿನ ಸ್ತುತಿ ನಾಟ್ಯಶಾಲೆಯ ಗುರು, ಕಥಕ್–ಭರತನಾಟ್ಯ ಕಲಾವಿದೆ, ಸಂಶೋಧಕಿ ವಿದುಷಿ ನಿವೇದಿತಾ ಶ್ರೀನಿವಾಸ್ ಅವರು ಈ ಸಂಚಿಕೆಯಿಂದ ಓದುಗರಿಗಾಗಿ ನರ್ತನ ಸುರಭಿ ಅಂಕಣಕ್ಕೆ ಲೇಖನಿ ಹಿಡಿಯಲಿದ್ದಾರೆ. ನರ್ತನ ಕ್ಷೇತ್ರದ ಹತ್ತು ಹಲವು ಸಮಸ್ಯೆ, ಜಿಜ್ಞಾಸೆ, ವಿಚಾರಗಳನ್ನು ಇಲ್ಲಿ ಅವರು ಮಥಿಸಲಿದ್ದಾರೆ. ಅಂಕಣ ವಿಚಾರದ ಕುರಿತ ಓದುಗರ ನೋಟ, ಪ್ರತಿಕ್ರಿಯೆಗಳಿಗೆ ಸದಾ ಮುಕ್ತ ಸ್ವಾಗತವಿದೆ.

ನೃತ್ಯದ ಕುರಿತಾದ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತ್ತು. ಅಲ್ಲಿ ನೃತ್ಯ ಸಂಶೋಧಕಿಯೊಬ್ಬರು ತಮ್ಮ ಪ್ರಬಂಧ ಮಂಡಿಸುತ್ತಾ, ಇಂದಿನ ಭರತನಾಟ್ಯದ ಅಭಿನಯ ಬಂಧಗಳಲ್ಲಿ ಅಡವುಗಳ ಬಳಕೆ ಪೂರಕವಾಗಿ ಆಗುತ್ತಿಲ್ಲ, ಅಲ್ಲದೆ ತರಗತಿಗಳಲ್ಲಿ ಕಲಿತದ್ದನ್ನೇ ವೇದಿಕೆಗೂ ತರುತ್ತಾ ನೃತ್ತದ ಔಚಿತ್ಯವನ್ನೇ ಮರೆತಿದ್ದಾರೆ ಎಂದರು. ನಂತರ, ಪ್ರಶ್ನೋತ್ತರ ಸಮಯದಲ್ಲಿ, ತರುಣ ನೃತ್ಯಗುರುವೊಬ್ಬರು, ಈ ವಿಚಾರಕ್ಕೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಅವರು, 'ನೃತ್ತ ಭಾವ ವಿಹೀನ'.. ಹೀಗಿರುವಾಗ, ನರ್ತನ ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವಾಗ, ಭಾವದ ಕಡೆ ಗಮನ ಕೊಡುವಂತೆ ಹೇಳಲಾಗುವುದಿಲ್ಲ, ಮೊದಲು ಅವರ ಅಂಗಶುದ್ಧಿಯಾಗಬೇಕು. ನಂತರ ಭಾವದೆಡೆಗೆ ಅವರನ್ನು ಎಳೆಯಬೇಕು ಎಂದರು. ಆಕೆ, ಪ್ರದರ್ಶನದ ಬಗ್ಗೆ ಹೇಳುತ್ತಿದ್ದರೆ, ಈ ಮಹನೀಯರು, ಕಲಿಕಾ ಕ್ರಮದ ಬಗ್ಗೆ ಮಾತಾಡುತ್ತಿದ್ದರು! ಎರಡೂ ಬೇರೆ ಬೇರೆ ಎಳೆಗಳು. ಇಲ್ಲಿ ಇದರ ಪರ – ವಿರೋಧಗಳನ್ನು ಚರ್ಚಿಸದೆ, ಕಲಿಕಾಕ್ರಮದ ಬಗ್ಗೆ ಮಹನೀಯರು ಹೇಳಿದ್ದನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.

'ನೃತ್ತ ಭಾವ ವಿಹೀನ' ಎಂಬುದನ್ನು ಒಪ್ಪಲು ಕಷ್ಟವಾಗುತ್ತದೆ. ಯಾವುದೇ ಕುಣಿತವಿರಲಿ, ಅಲ್ಲಿ ತಾನಾಗಿಯೇ ಉಲ್ಲಾಸದ ವಾತಾವರಣ ನಿರ್ಮಾಣವಾಗಿಬಿಡುತ್ತದೆ. ನರ್ತಕರೂ ಆನಂದದಿಂದ ಕುಣಿಯುತ್ತಾರೆ. ಇನ್ನು ಚಿಕ್ಕ ಮಕ್ಕಳಿಗಂತೂ ಕುಣಿಯುವಾಗ ಎಲ್ಲಿಲ್ಲದ ಉತ್ಸಾಹ ! ಮುಖದ ತುಂಬಾ ನಗು ತುಂಬಿ ತುಳುಕುತ್ತಿರುತ್ತದೆ. ಸಂತೋಷ ಮಕ್ಕಳ ಸಹಜಗುಣವಾಗಿರುವಾಗ, ನಮ್ಮ ನೃತ್ಯ ಶಾಲೆಗಳಲ್ಲಿ, ಅದೇ ನಗುವನ್ನು ತಂದುಕೊಳ್ಳುವಂತೆ ಹೇಳಲು ಸಾಧ್ಯವಿಲ್ಲವೇ? ನಿಜ, ಕುಣಿತದಲ್ಲಿ ಮನಸೋ ಇಚ್ಛೆ ನರ್ತಿಸಬಹುದು. ಆದರೆ ನೃತ್ಯಕಲಿಕೆಯಲ್ಲಿ ಒಂದು ನಿಯಮದಂತೆ ಕಲಿಯಬೇಕಾಗುತ್ತದೆ. ಕೆಲವೊಮ್ಮೆ ಶ್ರಮದಾಯಕವೆನಿಸಿ ಮಕ್ಕಳಿಗೆ ಅಳುಬರುವುದೂ ಉಂಟು. ಇಂತಹ ಸಂದರ್ಭದಲ್ಲಿ, ಗುರು ಹೇಗೆ ಮಕ್ಕಳನ್ನು ಹುರಿದುಂಬಿಸಿ ಆನಂದದಿಂದ ನರ್ತಿಸಲು ಪ್ರೇರೇಪಿಸುತ್ತಾರೆ ಎಂಬುದೇ ನಿರ್ಣಾಯಕವಾಗುತ್ತದೆ. ಯಾವುದೇ ಹಸ್ತ, ಅದರ ಚಲನೆ, ಸ್ಥಾನಕ, ಪಾದಚಲನೆ ಇತ್ಯಾದಿಗಳ ಉದ್ದೇಶ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಹೇಳಿದರೆ, ಒಂದು ಹಂತದವರೆಗೆ ಪ್ರಯೋಜನವಾಗುತ್ತದೆ; ಮುಂದಿನ ಅಭ್ಯಾಸಕ್ಕೆ ತಯಾರು ಮಾಡಿದಂತಾಗುತ್ತದೆ.

ಆರಂಭದಿಂದಲೇ, ಮುಗುಳ್ನಗೆಯೊಂದಿಗೆ ನರ್ತಿಸುವಂತೆ ಹೇಳಿದರೆ ಉತ್ತಮ. ಆಗಾಗ ನಗಿಸುತ್ತಾ, ತಿಳಿ ವಾತಾವರಣದಲ್ಲಿ ಕಲಿಸಿದರೆ, ಮಕ್ಕಳು ತರಗತಿಗಳಿಗೆ ಖುಷಿಯಿಂದ ಬರುತ್ತಾರೆ. ಹಸ್ತ ಹೋದಲ್ಲಿ, ದೃಷ್ಟಿಯೂ ಹೋಗುವಂತೆ ಹೇಳುತ್ತೇವಷ್ಟೇ? ಜೊತೆಗೆ ಮುಖದಲ್ಲಿ ಮಂದಹಾಸವೊಂದು ಇರುವಂತೆಯೂ ಹೇಳಬಹುದಲ್ಲ? ಇಲ್ಲಿ ಭಾವ ವಿಹೀನ ಎಂಬುದಕ್ಕೆ ಅರ್ಥವೇ ಇಲ್ಲ. ನಗುವಿಗೆ ಎಂಥ ಅಯಸ್ಕಾಂತೀಯ ಗುಣ ಇದೆ ! ಅದರಲ್ಲೂ ಮಕ್ಕಳು ನಗುತ್ತಾ ನರ್ತಿಸಿದರೆ, ನೋಡುವವರಿಗೆ ಆನಂದವೋ ಆನಂದ !

'ನೃತ್ತದಲ್ಲಿ ನಗು' – ಈ ವಿಚಾರ ಸ್ಪಷ್ಟವಾಯಿತು. ಇನ್ನು ಅಭಿನಯದಲ್ಲಿ ತರಬೇತಿ ಕೊಡುವುದು ಹೇಗೆ? ಈಗಂತೂ ಐದು, ಆರನೇ ವಯಸ್ಸಿಗೇ ನೃತ್ಯಾಭ್ಯಾಸ ಆರಂಭಿಸುತ್ತಾರೆ. ಹತ್ತನೇ ವಯಸ್ಸಿಗೇ ಜೂನಿಯರ್ ಪರೀಕ್ಷೆ ತೆಗೆದುಕೊಳ್ಳಬಹುದಾದ್ದರಿಂದ, ಆ ವಯಸ್ಸಿಗೇ ಎರಡು ದೇವರನಾಮಗಳ ಪಾಠ ಆಗಿರಬೇಕಾಗಿರುತ್ತದೆ. ಅಂದರೆ, ಸುಮಾರು ಒಂಭತ್ತನೇ ವಯಸ್ಸಿಗೇ ಅಭಿನಯದ ತರಬೇತಿ ಶುರುವಾಗಬೇಕು. ಅಷ್ಟು ಚಿಕ್ಕ ವಯಸ್ಸಿಗೇ ಅಭಿನಯ ಹೇಗೆ ಹೇಳಿಕೊಡುವುದು? ಸಾಮಾನ್ಯವಾಗಿ ಭಕ್ತಿಪ್ರಧಾನವಾದ ಸಾಹಿತ್ಯವನ್ನೇ ಆರಿಸಿಕೊಳ್ಳುತ್ತಾರೆ, ಅಭಿನಯದ ಜಂಜಾಟವೇ ಬೇಡವೆಂದು. ಈ ನಿಟ್ಟಿನಲ್ಲಿ ಹೊಸ ಪ್ರಯೋಗಗಳು ನಡೆದರೆ ಚೆನ್ನ.

ಮಕ್ಕಳಿಗೆ, ನವರಸ ಹೇಗೆ ಹೇಳಿಕೊಡಬಹುದು... ನೋಡೋಣ. ಹುಟ್ಟಿದಂದಿನಿಂದಲೂ, ಮಗುವು ಎಲ್ಲಾ ರೀತಿಯ ಭಾವನೆಗಳನ್ನು ಅನುಭವಿಸುತ್ತಲೇ ಇರುತ್ತದೆ. ನಿಧಾನವಾಗಿ ಸುತ್ತಲ ಪ್ರಪಂಚದ ಅರಿವಾಗುತ್ತದೆ. ಹಾಗೇ ಸಂದರ್ಭಕ್ಕೆ ತಕ್ಕಂತೆ ಪ್ರತಿಕ್ರಿಯಿಸುವುದೂ ಕಲಿಯುತ್ತದೆ. ಸುತ್ತಲ ಜನರ ನಡುವಳಿಕೆಗಳನ್ನು ಗಮನಿಸಿ, ಅನುಕರಿಸುವುದೂ ಉಂಟು. ಹೀಗಿರುವಾಗ ಅವರ ಅನುಭವ, ತಿಳುವಳಿಕೆಗೆ ತಕ್ಕಂತೆ, ಒಂದೊಂದು ಭಾವದ ಪರಿಚಯ ಮಾಡಿಕೊಡುವುದು ಕಷ್ಟವೇ? ಇಲ್ಲ. ಅದರಲ್ಲೂ ಒಂಭತ್ತನೇ ವಯಸ್ಸಿಗಂತೂ ಸಾಕಷ್ಟು ರಾಗ,

ದ್ವೇಷಗಳ ಅನುಭವವಾಗಿರುತ್ತದೆ ! ಅವುಗಳನ್ನೇ ಆಧಾರವಾಗಿಟ್ಟುಕೊಂಡು ನಾನಾ ಭಾವನೆಗಳಿಂದ ಕೂಡಿದ ದೇವರನಾಮ ಹೇಳಿಕೊಡಬಹುದು. ಜೊತೆಗೆ, ದೇವರನಾಮ ಸಾಹಿತ್ಯದ ಪೂರ್ಣ ಚಿತ್ರಣ ಕೊಟ್ಟರೆ ಇನ್ನೂ ಒಳ್ಳೆಯದು.

ಇಷ್ಟಲ್ಲದೆ, ಅಂಗಾಭ್ಯಾಸ ಮಾಡಿಸುವಾಗ, ಸಂಯುತ–ಅಸಂಯುತ ಹಸ್ತಗಳೊಂದಿಗೆ, ಶಿರೋಭೇದ, ದೃಷ್ಟಿಭೇದ ಗಳನ್ನೂ ಹೇಳಿಕೊಡುವುದಿಲ್ಲವೇ ? ಅದೇ ರೀತಿ, ನವರಸಗಳನ್ನೂ ಸಣ್ಣ ಸಣ್ಣ ಉದಾಹರಣೆಗಳ ಮೂಲಕ ಹೇಳಿಕೊಡಬಹುದು. ರಸಗಳ ಮೂಲವಾದ ಸ್ಥಾಯೀ ಭಾವಗಳ ಪರಿಚಯ ಮಾಡಿಸುವುದು ಸುಲಭ. ಶೃಂಗಾರದ ರತಿ ಭಾವಕ್ಕೆ, ಅವರ 'ಬೆಸ್ಟ್‌ಫ್ರೆಂಡ್' ಅನ್ನು ನೆನಪಿಸಿದರೆ ಸಾಕು. ಆ ಖುಶಿ ತನ್ನಿಂದ ತಾನೇ ಬಂದು ಬಿಡುತ್ತದೆ. ಅದರ ವಿರುದ್ಧವಾದ ಕ್ರೋಧಕ್ಕೆ, ಅವರ 'ಎನೆಮಿ'ಯನ್ನು ನೆನೆಸಿಕೊಳ್ಳುವಂತೆ ಹೇಳಿ! ಅವರ ಮೇಲಿನ ಸಿಟ್ಟು, ಎಷ್ಟು ಸುಲಭವಾಗಿ ಮುಖದ ಮೇಲೆ ಬಂದು ಕೂರುತ್ತದೆ ! ಆ ನಿಮಿಷದಲ್ಲಿ ಅವರ ಮುಖ, ಮನಸ್ಸಿನಲ್ಲಾಗುವ ಬದಲಾವಣೆಗಳನ್ನು ಗಮನಿಸುವಂತೆ ಹೇಳಿ. ಒಂದು ಜೋಕ್ ಹೇಳಿ ನಗಿಸಿ ಅಥವಾ ಒಬ್ಬರು ಇನ್ನೊಬ್ಬರಿಗೆ ಕಚಗುಳಿ ಇಡುವಂತೆ ಹೇಳಿ. ಆಗ ನಗುವ ಪ್ರಮಾಣ ಗಮನಿಸುವಂತೆ ಹೇಳಬಹುದು. ಹಾಸ್ಯದಚಿತ್ರಣ ಸಿಕ್ಕಿತಲ್ಲ! ಪೆಟ್ಟಾದ ನಾಯಿ ಮರಿಯೊಂದನ್ನು ನೋಡಿದರೆ 'ಅಯ್ಯೋ ಪಾಪ!' ಅಂತ ಅನ್ನಿಸಲ್ವಾ? ಅದೇ ಕರುಣೆ.

ಕತ್ತಲ ಕೋಣೆಯೊಳಗೆ ಹೋಗಲು ಏನೋ ಅಂಜಿಕೆ ! ಹೌದಲ್ವೇ? ಅಮ್ಮ ಹೇಳಿದ ಗುಮ್ಮ ಅಲ್ಲಿ ಅವಿತುಕುಳಿತಿದ್ದರೆ ? ಏನೋ ಶಬ್ದ ಆದರೆ, ಗುಮ್ಮ ಬಂದೇ ಬಿಟ್ಟ ಅಂತ ಅಲ್ಲೇ ಥರಥರ ನಡುಗಲ್ವೇ ? ಭಯದ ಅನುಭವ ಯಾರಿಗಿಲ್ಲ? ಇನ್ನು, ಪರೀಕ್ಷೆಗೆ ಎಲ್ಲಾ ಓದಿದ್ದರೆ ಹೇಗೆ ಧೈರ್ಯದಿಂದ ಎದುರಿಸುತ್ತೇವೆ ? ಅದೇ ವೀರ ರಸದ ಸ್ಥಾಯಿ. ಗೆಳತಿಯ ಹುಟ್ಟು ಹಬ್ಬಕ್ಕೆ ಅವರ ಮನೇಲಿ ಒಂದು ದೊಡ್ಡ ಕೇಕ್ ಮಾಡಿಸಿದ್ದರೆ, ಅದನ್ನ ನೋಡಿ ಹೇಗೆ ಆಶ್ಚರ್ಯ ಪಡುತ್ತೀರಿ? ಕಣ್ಣೆರಡೂ ಅರಳಿಸಿ, 'ಅಬ್ಬಾ' ಅಂತ ಉದ್ಗಾರ ತೆಗೆಯುವುದಿಲ್ಲವೇ? ಅದೇ ಅದ್ಭುತ ! ದಾರಿಯಲ್ಲಿ ಸೆಗಣಿ ತುಳಿದರೆ, ಅಸಹ್ಯ ಆಗತ್ತಲ್ಲ, ಅದೇ ಭೀಭತ್ಸ ! ಮತ್ತೆ ಕಡೆಯದು, ನಾವು ಮಂದಿರದಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸುವಾಗ ಹೇಗೆ ಸಮಾಧಾನವಾಗಿ ಇರುತ್ತೇವೆ? ಅದೇ ಶಾಂತಿಯಸ್ವರೂಪ. ನವರಸಗಳ ಸ್ಥಾಯಿ ಭಾವಗಳ ಪರಿಚಯ ಮಾಡಿಕೊಟ್ಟಂತಾಯಿತಲ್ವೇ? ತರಗತಿಗಳಲ್ಲಿ ಇದನ್ನೇ ಅಭ್ಯಾಸ ಮಾಡಿಸುತ್ತಿದ್ದರೆ, ಮುಂದೆ, ಸಂದರ್ಭೋಚಿತವಾಗಿ ಪ್ರಯೋಗಿಸುವುದು ಹೇಳಿಕೊಡಬಹುದು.

ಇದರೊಡನೆ, ಸಂಯೋಜನೆಯ ಹಂತದಲ್ಲಿ, ಮಕ್ಕಳಿಗೂ ತಮ್ಮ ಕಲ್ಪನಾ ಶಕ್ತಿ ಪ್ರಯೋಗಿಸಲು ಅವಕಾಶ ನೀಡಬಹುದು. ಇಲ್ಲಿ ಎಷ್ಟೋ ಬಾರಿ ಗುರುವಿಗೆ ಹೊಳೆಯದಿದ್ದು ಮಕ್ಕಳಿಂದ ಬಂದಿರುವ ಸಾಧ್ಯತೆಗಳಿವೆ. ಕಾರಣ ಗೊತ್ತೇ? ಗುರುವು ಒಂದೇ ದಿಕ್ಕಿನಲ್ಲಿ ಯೋಚಿಸುತ್ತಿದ್ದರೆ, ಮಕ್ಕಳು ಅವರ ಲೋಕಾನುಭವಕ್ಕೆ ನಿಲುಕಿದ್ದನ್ನು ಹೊರಹಾಕುವ ಪ್ರಯತ್ನ ಮಾಡುತ್ತಿರುತ್ತಾರೆ. ಅವರ ಕಲ್ಪನೆ ಸಹಜವಾಗಿ ಕೂಡ ಇರುತ್ತದೆ. ಕೇವಲ ನೃತ್ಯದ ಗುಂಗಿನಲ್ಲಿರುವ ಮತ್ತು ಒಂದು ಚೌಕಟ್ಟಿನ ಒಳಗೇ ನೋಡುತ್ತಿರುವ ಗುರುವಿಗೆ ಇದು ಅರಿವಿಗೆ ಬರದೇ ಇರಬಹುದು. 'ಇಲ್ಲಿ ಮಕ್ಕಳ ಅನಿಸಿಕೆ/ಅಭಿಪ್ರಾಯ ಏಕೆ ತೆಗೆದುಕೊಳ್ಳಬೇಕು? ನಾನು ಗುರು, ನಾನು ಹೇಳಿದ್ದಷ್ಟನ್ನೇ ಅವರು ಕೇಳತಕ್ಕದ್ದು, ಮಾಡತಕ್ಕದ್ದು' ಎಂದು ಕೂತರೆ, ಸ್ವತಃ ಗುರುವೇ ಅಭಿವೃದ್ಧಿ ಹೊಂದಲಾರ. 'ಕೆಲವಂ ಬಲ್ಲಿದರಿಂದರಿತು...' ಎಷ್ಟು ನಿಜವಲ್ಲವೇ? ಸರ್ವ ಕಾಲಕ್ಕೂ ಸಮಂಜಸವೆನಿಸುವ ಸುಭಾಷಿತಗಳಲ್ಲೂ ಹೀಗೆ ಹೇಳಲಾಗಿದೆ – 'ಬಾಲಾದಪಿ ಗೃಹೀತವ್ಯಂ ಯುಕ್ತಮುಕ್ತಂ ಮುನೀಷಿಭಿಃ..'– ಮಕ್ಕಳು ಹೇಳಿದ್ದರೂ ಯುಕ್ತವಾಗಿದ್ದರೆ ಅದನ್ನು ಪರಿಗಣಿಸಬೇಕು; ಹೇಗೆ ಮುನಿಗಳ ವಾಕ್ಯಕ್ಕೆ ಪ್ರಾಮುಖ್ಯತೆ ಕೊಡುತ್ತೇವೋ ಹಾಗೆ !

ಹಾಗೆ ನೋಡಿದರೆ, ಮಕ್ಕಳೇ ಎಷ್ಟೋ ಚೆನ್ನಾಗಿ ಯಾವ ಹಿಂಜರಿಕೆಯೂ ಇಲ್ಲದೆ, ಭಾವನೆಗಳನ್ನು ಅಭಿವ್ಯಕ್ತ ಪಡಿಸುತ್ತಾರೆ. ಆ ಮುಗ್ಧತೆಯೇ ನೋಡಲು ಚೆಂದ. ಮಕ್ಕಳೊಡಗೂಡಿ ನಾವೂ ಮಕ್ಕಳಾಗೋಣ.. ಅವರ ಪ್ರಪಂಚ ಅತೀ ಸುಂದರವಾದದ್ದು. ಕೆಲ ಹೊತ್ತಾದರೂ ಆ ಲೋಕದಲ್ಲಿ ವಿಹರಿಸಲು ಅವಕಾಶ ಸಿಕ್ಕರೆ, ಅದಕ್ಕಿಂತ ಇನ್ನೇನು ಬೇಕಲ್ವೇ?

ಅಂತ್ಯವಾಕ್ಯ – ನೃತ್ಯ ಒಂದು ಪ್ರದರ್ಶನ ಕಲೆ. ಆದ್ದರಿಂದ, ಕಲಿಕೆಯ ಫಲ ಪ್ರದರ್ಶನದಲ್ಲಿ ಕಾಣಬೇಕು. ಆದರೆ ಕಲಿಕಾಪಾಠಗಳೇ ಪ್ರದರ್ಶಿತವಾಗಬಾರದು ಎಂಬುದು ರಸಿಕರ ಅಭಿಪ್ರಾಯ.

ನಮ್ಮ ಬಳಗದಲ್ಲಿ ಮತ್ತಷ್ಟು ಮಂದಿ ಸೇರ್ಪಡೆ

ವಿದುಷಿ ಸಹನಾ ಭಟ್, ನಿರ್ದೇಶಕರು, ನಾಟ್ಯಾಂಜಲಿ ನೃತ್ಯಕಲಾ ಕೇಂದ್ರ, ಬಸವೇಶ್ವರನಗರ, ಹುಬ್ಬಳ್ಳಿ.

ವಿದುಷಿ ರೇಖಾ ಹೆಗಡೆ, ನಿರ್ದೇಶಕರು, ಶಾಂತಲಾ ನಾಟ್ಯಾಲಯ, ಸದಾಶಿವನಗರ, ಬೆಳಗಾವಿ.

ವಿದುಷಿ ಭ್ರಮರಿ ಶಿವಪ್ರಕಾಶ್, ನಾದನೃತ್ಯ ಸ್ಕೂಲ್ ಆಫ್ ಡ್ಯಾನ್ಸ್, ಮಂಗಳೂರು.

ಹಸ್ತ ಮಯೂರಿ



ಸ್ವಸ್ತಿಕ ಹಸ್ತ

ಸ್ವಸ್ತಿಕದ ಉಲ್ಲೇಖ ಸಾಮಾನ್ಯವಾಗಿ ಎಲ್ಲಾ ಲಕ್ಷಣಗ್ರಂಥಗಳಲ್ಲಿ ಕಂಡುಬಂದಿದ್ದು ಒಂದು ಕೈ/ಹಸ್ತವನ್ನು ಪರಸ್ಪರ ಸಮಾನಾಂತರದಲ್ಲಿ ಬೆಸೆದು ಮತ್ತೊಂದರ ವಿರುದ್ಧಾಭಿಮುಖವಾಗಿಸುವುದೇ ಸ್ವಸ್ತಿಕದ ಲಕ್ಷಣವಾಗಿದೆ. ಈ ಸ್ವಸ್ತಿಕಕ್ಕೆ ಯಾವ ಹಸ್ತ/ಮುದ್ರೆಯನ್ನು ಹೇಳಲಾಗುತ್ತದೆಯೋ ಅದರ ಆಧಾರದಲ್ಲಿ ಸಂಯುತ ಹಸ್ತದ ಹೆಸರು ನಿರ್ಧರಿತವಾಗುತ್ತದೆ. ನಾಟ್ಯಶಾಸ್ತ್ರದ ಲಲಿತ, ಮುಷ್ಟಿಕಸ್ವಸ್ತಿಕ, ಅರಾಲಕಟಕಾಮುಖ ನೃತ್ತಹಸ್ತದಲ್ಲಿ ಮತ್ತು ಹಲವು ಚಾರಿ, ಕರಣಗಳಲ್ಲಿ ಸ್ವಸಿಕದ ಬಳಕೆ ಹೇರಳವಾಗಿದೆ. ಭರತಾರ್ಣವ ತಿಳಿಸುವ ಸ್ಥಾನಕಗಳಲ್ಲಿಯೂ ಸ್ವಸಿಕದ ಬಳಕೆಯಿದೆ. ಅಂತೆಯೇ ಅಡವು ವಿನ್ಯಾಸಗಳಲ್ಲೂ ಸ್ವಸ್ತಿಕವು ಬಳಸಲ್ಪಡುತ್ತದೆ. ಒಡಿಸ್ಸಿ, ಕಥಕ್‌ನೃತ್ಯಗಳಲ್ಲಿಯೂ ಈ ಹಸ್ತದ ಬಳಕೆ ಹೇರಳವಾಗಿದೆ.

ಎರಡು ಪತಾಕಹಸ್ತಗಳನ್ನು ಮಣಿಕಟ್ಟಿನ ಹತ್ತಿರ ಸ್ವಸ್ತಿಕಾಕಾರವಾಗಿ ಅಡ್ಡವಾಗಿ ಹಿಡಿದರೆ ಪತಾಕಾಸ್ವಸ್ತಿಕ ವಾಗುವುದು. ಇದು ಅಭಿನಯದರ್ಪಣದ ಸಂಯುತ ಮತ್ತು ನೃತ್ತ ಹಸ್ತಗಳಲ್ಲೊಂದು. ವಿನಿಯೋಗ : ಮೊಸಳೆ, ಭಯದಿಂದ ಮಾತನಾಡುವುದು, ವಾದಮಾಡುವುದು, ಹೊಗಳುವುದು.

ಇತರೇ ವಿನಿಯೋಗ : ವಿವಾದ, ಸ್ವಸ್ತಿಕಾಯುಧ, ಕೊಂಬೆಗಳು ಕವಲೊಡೆಯುವುದು, ಹಂಸಡೋಲ, ಹೆದರಿಕೆಯಿಂದ 'ಹಾಗೆಯೇ ಆಗಲಿ' ಎನ್ನುವುದು, ವನ, ಸಮುದ್ರ, ಋತುಗಳು, ವಿಸ್ತೀರ್ಣವಾದ ಪೃಥ್ವಿ, ಬಾಗಿಲಿಗೆ ಹಾಕುವ ಅಗಣಿ, 'ಹೀಗಾಗಬಹುದು', 'ಇರಲಿ ಬಿಡು' ಎನ್ನುವುದು, ಹಸ್ತಾಚಾರ ಬಂಧವೆಂಬ ಸಂಯೋಗ–ಚಲನೆಗಳ ನೃತ್ಯಶೈಲಿ, ಗೆಜ್ಜೆ ಕಟ್ಟುವ ಪ್ರದೇಶ. **ನಿತ್ಯಜೀವನದಲ್ಲಿ** ಪರಸ್ಪರ ವಿವಾದ, ವಿರುದ್ಧ ಎನ್ನಲು ಬಳಸುತ್ತಾರೆ. ಕರಾಟೆಯಲ್ಲಿ ಇದರ ಬಳಕೆಯಿದೆ.

ತ್ರಿಪತಾಕ ಹಸ್ತಗಳನ್ನು ಸ್ವಸ್ತಿಕಾಕಾರವಾಗಿ ಹಿಡಿಯುವುದು ತ್ರಿಪತಾಕ ಸ್ವಸ್ತಿಕ ಹಸ್ತ. ಇದು ಭರತಾರ್ಣವದಲ್ಲಿ ಉಲ್ಲೇಖಿತ. ವಿನಿಯೋಗ : ಭಯ, ಮರ್ಯಾದಾ ಭಾವ, ಇಂದ್ರಹಸ್ತ.

ಹಂಸಪಕ್ಷ ಹಸ್ತಗಳನ್ನು ಮುಂಗೈಯಲ್ಲಿ ಸ್ವಸ್ತಿಕವಾಗಿಸಿ ಇಡುವುದು ಸ್ವಸ್ತಿಕಾಮುಖ ಹಸ್ತ. ವಿನಿಯೋಗ : ಕಲ್ಪವೃಕ್ಷ, ಪರ್ವತ.

ತ್ರಿಪತಾಕ ಹಸ್ತಗಳನ್ನು ದೂರವಿರಿಸಿದರೂ ಹತ್ತಿರ ಬಂದು ಪರಸ್ಪರ ಸ್ವಸ್ತಿಕವಾಗಿ ನಿಲ್ಲುವಂತಹ ಚಲನೆ ವಿಪ್ರಕೀರ್ಣ ಹಸ್ತದ್ದು. ಇನ್ನೊಂದು ಮೂಲದ ಪ್ರಕಾರ ಸ್ವಸ್ತಿಕಾಮುಖ ಹಸ್ತವನ್ನು ತಕ್ಷಣ ಬೇರ್ಪಡಿಸುವುದು ವಿಪ್ರಕೀರ್ಣದ ಲಕ್ಷಣ. ದಕ್ಷಿಣಾಮೂರ್ತಿ ಇದರ ಅಧಿದೇವತೆ. ವಿನಿಯೋಗ : ಗುರಾಣಿ, ವಿವಿಧ ಮಂತ್ರಾಲೋಚನೆಯ ಕಲ್ಪನೆ, ಹಗ್ಗಜಗ್ಗಾಟ, ಕ್ಷಮೆ, ಗಣನೆ.

ಮುಷ್ಟಿಗಳನ್ನು ಹೊಟ್ಟೆಯ ಬಳಿ ಸ್ವಸ್ತಿಕಾಕಾರದಲ್ಲಿ ಹಿಡಿಯುವುದು ಮುಷ್ಟಿಸ್ವಸ್ತಿಕ ಹಸ್ತ. ಕಿಂಪುರುಷ ಇದರ ಅಧಿದೇವತೆ. ವಿನಿಯೋಗ : ಹೂಚೆಂಡಿನ ಆಟ, ವರ್ತುಲಾಕಾರದ ರಚನೆ, ಲಜ್ಜೆ.

ಎರಡು ಕರ್ತರೀ ಮುಖ ಹಸ್ತಗಳನ್ನು ಸ್ವಸ್ತಿಕಾಕಾರವಾಗಿ ಹಿಡಿಯುವುದು ಕರ್ತರೀ ಸ್ವಸ್ತಿಕ ಹಸ್ತದ ಲಕ್ಷಣ. ಅಭಿನಯದರ್ಪಣದ ಪ್ರಕಾರ ಇದೂ ಒಂದು ಸಂಯುತ ಹಸ್ತಪ್ರಕಾರ. ವಿನಿಯೋಗ: ಮರದ ಕೊಂಬೆಗಳು, ಶಿಖರಗಳು, ವೃಕ್ಷಗಳು, ಅಡ್ಡವಾಗಿರುವುದು. ಇತರೇ ವಿನಿಯೋಗ: ಜಿಂಕೆಯ ಕೊಂಬು, ಅಡ್ಡದಾರಿ, ಕುರಿ.

ಇದೇ ರೀತಿಯಲ್ಲಿ **ನಾಟ್ಯಶಾಸ್ತ್ರ, ಹಸ್ತ ಮುಕ್ತಾವಳಿ, ಸಂಗೀತ ರತ್ನಾಕರವು ಅರಾಳ ಹಸ್ತಗಳನ್ನು ಸ್ವಸ್ತಿಕಾಕಾರವಾಗಿ ಹಿಡಿಯಲು ಸೂಚಿಸಿದೆ. ಹೀಗೆ ಅರಾಳ ಹಸ್ತಗಳನ್ನು ಸ್ವಸ್ತಿಕವಾಗಿ ಹಿಡಿಯುವುದರಿಂದ ಅರಾಳಸ್ವಸ್ತಿಕ ಹಸ್ತವೇರ್ಪಡುತ್ತದೆ. ಕೂರ್ಮಕ ಎಂಬ ಹೆಸರನ್ನು ಸಂಗೀತ ರತ್ನಾಕರ ಗ್ರಂಥ ಸೂಚಿಸಿದೆ.** ವಿನಿಯೋಗ : ದಿಕ್ಕು, ಮೋಡ, ಆಕಾಶ, ವಿಸ್ತಾರ, ಸಮುದ್ರ, ಏಳು ದ್ವೀಪಗಳಿಂದ ಸುತ್ತುವರಿದ ಭೂಮಿ, ಏಳು ದ್ವೀಪ, ಏಳು ಸಾಗರ, ಏಳು ಸ್ವರ್ಗ, ನೌಕೆ, ಸಂಪತ್ತು, ಹಬ್ಬ, ಬೆಳಗು, ದಿನ–ರಾತ್ರಿ, ಸಂಜೆಯಲ್ಲಿ ಹೋಗುವುದು, ಮೋಡ, ಆಕಾಶ, ನಕ್ಷತ್ರ, ಗ್ರಹಗಳು, ನೀರಿನಿಂದ ಆವೃತವಾದದ್ದು, ವಾಸನೆ, ತುಟಿಗಳ ಒಂದಾಗುವಿಕೆ, ಬೆಳದಿಂಗಳು, ಸರ್ಪ, ಸೂರ್ಯ, ಧೂಮ, ಗಾಳಿ, ಧೂಳು,

ಸೌಂದರ್ಯ, ಚೂಪಾದ ವಸ್ತು, ಮಧ್ಯಾಹ್ನ, ಅರಣ್ಯ, ಸೇನೆ, ಹೆಮ್ಮೆಯುಳ್ಳ ವ್ಯಕ್ತಿ, ಸೇನಾಳುಗಳ ಕದನ, ಮಿಂಚು, ವಿನಯ, ಮಂತ್ರ ಮುಂತಾದುವನ್ನು ಶ್ರದ್ಧೆಯಿಂದ ಕೇಳುವುದು ಅಥವಾ ನೋಡುವುದು, ಕುತ್ತಿಗೆಯ ಆಭರಣ, ಪುಷ್ಪಮಾಲಿಕೆ, ವಂಚಕ, ಬೈಯುವುದು, ತಪ್ಪು ಶಬ್ದ, ಸಾಮಾನ್ಯ ವ್ಯಕ್ತಿ, ಮಹತ್ವವಾದ ವಿಷಯ, ಸಹಿಸಿಕೊಳ್ಳುವುದು, ಹಸ್ತಚಾರಬಂಧವೆಂಬ ನೃತ್ಯ, ಕಾಲಿಗೆ ಗೆಜ್ಜೆ ಕಟ್ಟುವ ಪ್ರದೇಶ.

ಅರ್ಧಚಂದ್ರ ಹಸ್ತಗಳನ್ನು ಅಂಗೈಭಾಗವು ತನಗೆ ಅಭಿಮುಖವಾಗಿರುವಂತೆ ಅಡ್ಡಲಾಗಿ ಹಿಡಿದು ಸ್ವಸ್ತಿಕಾಕಾರಮಾಡಿ ಹೆಬ್ಬೆರಳನ್ನು ಕೊಂಡಿಯಂತೆ ಸೇರಿಸುವುದು ಗರುಡಹಸ್ತದ ಲಕ್ಷಣ. ಇದು ಅಭಿನಯ ದರ್ಪಣದ ಸಂಯುತ ಹಸ್ತಪ್ರಕಾರದಲ್ಲೊಂದು. ವಿನಿಯೋಗ : ಗರುಡ. **ಯಕ್ಷಗಾನದಲ್ಲಿ** ಗರುಡ ಪಕ್ಷಿಯನ್ನು ತೋರಿಸಲು ಈ ಹಸ್ತವನ್ನು ಬಳಸುತ್ತಾರಾದರೂ, ಇದಕ್ಕೆ ಪರ್ಯಾಯವಾಗಿ ತಾರ್ಕ್ಷ್ಯ ಎಂಬ ಮುದ್ರೆಯನ್ನೂ ಬಳಸುತ್ತಾರೆ. ಇದೇ ತಾರ್ಕ್ಷ್ಯಹಸ್ತವು ಮಣಿಪುರಿ ಇತ್ಯಾದಿ ನೃತ್ಯಪ್ರಕಾರಗಳಲ್ಲಿ (ಎರಡು ಕೈಯ ಮಣಿಕಟ್ಟನ್ನು ಸೇರಿಸಿ ಹೊರಮುಖವಾಗಿ ಅಂಗೈಯನ್ನು ಹಿಡಿಯುವುದು) ಬಳಕೆಯಲ್ಲಿದೆ. **ನಿತ್ಯಜೀವನದಲ್ಲಿ** ಗರುಡಹಸ್ತವನ್ನು ಹಕ್ಕಿ ಹಾರಾಟದ ಸೂಚನೆಗೆ ಬಳಸುತ್ತಾರೆ.

ಸರ್ಪಶೀರ್ಷಹಸ್ತಗಳನ್ನು ಮಣಿಬಂಧದ ಬಳಿ ಸ್ವಸ್ತಿಕಾಕಾರವಾಗಿ ಹಿಡಿಯುವುದು ನಾಗಬಂಧ ಹಸ್ತ. ಅಭಿನಯದರ್ಪಣದ ಪ್ರಕಾರ ಇದೂ ಒಂದು ಸಂಯುತ ಹಸ್ತ. ನಾಗಬಂಧವೆಂದರೆ ಸರ್ಪ ಬಂಧ ಎಂದರ್ಥ. ವಿನಿಯೋಗ : ಸರ್ಪಗಳ ರತಿಬಂಧ, ಸರ್ಪ ದಂಪತಿಗಳು, ಲತಾಮಂಟಪ (ಬಳ್ಳಿಗಳ ಹಂದರ) ಅಥರ್ವಣ ವೇದದ ಮಂತ್ರ. **ನಿತ್ಯಜೀವನದಲ್ಲಿ** ಸರ್ಪಜೋಡಿ ಎನ್ನಲು ಬಳಸುತ್ತಾರೆ. ಕರಾಟೆಯಲ್ಲಿ ಇದರ ಬಳಕೆ ಇದೆ.

ಕಪಿತ್ಥ ಹಸ್ತಗಳನ್ನು ಮಣಿಕಟ್ಟಿನ ಬಳಿ ಸ್ವಸ್ತಿಕಾಕಾರವಾಗಿ ಹಿಡಿಯುವುದನ್ನು ಭೇರುಂಡಹಸ್ತವೆನ್ನುತ್ತಾರೆ. ಇದನ್ನು ಗಂಡ ಭೇರುಂಡ ಹಸ್ತ ಎಂದೂ ಹೇಳುತ್ತಾರೆ. ಇದೂ ಕೂಡ ಅಭಿನಯದರ್ಪಣದ ಸಂಯುತ ಹಸ್ತಗಳಲ್ಲೊಂದು. ವಿನಿಯೋಗ : ಭೇರುಂಡಪಕ್ಷಿ, ಪಕ್ಷಿದಂಪತಿ.

ಬಾಲರಾಮ ಭರತದಲ್ಲಿ ಉಲ್ಲೇಖಿಸಲಾದ ಮಲ್ಲಯುದ್ಧ ಹಸ್ತವು ಸರ್ಪಶೀರ್ಷ ಮತ್ತು ಸ್ವಸ್ತಿಕ ಹಸ್ತಗಳ ಸಮ್ಮಿಲನದಂತೆ ತೋರುತ್ತದೆ. ವಿನಿಯೋಗಗಳು ಸ್ಪಷ್ಟವಾಗಿ ಕಂಡುಬರದಿದ್ದರೂ; ಮಲ್ಲಯುದ್ಧ, ಜಟ್ಟಿಗಳ ತಾಲೀಮಿನಲ್ಲಿ ಬಳಕೆಯಾಗುವಂತದ್ದು ಎನ್ನುವುದನ್ನು ಕಂಡುಕೊಳ್ಳಬಹುದು.

ಅಲಪದ್ಮ ಹಸ್ತಗಳನ್ನು ಸ್ವಸ್ತಿಕವಾಗಿರಿಸುವುದು **ದಶರಥರಾಜ**ನನ್ನು ಸೂಚಿಸಿದರೆ; ಚತುರ ಹಸ್ತಗಳನ್ನು ಮೇಲ್ಮುಖವಾಗಿರಿಸಿ ಮುಂಗೈ ಬಳಿ ಸ್ವಸ್ತಿಕಾಕಾರ ಮಾಡುವುದು **ಮಹಾಮೇರು ಪರ್ವತ**ದ ಸೂಚಕ. ಪತಾಕ ಮತ್ತು ಚತುರವನ್ನು ಎರಡು ಕೈಯಲ್ಲಿ ಹಿಡಿದು ಸ್ವಸ್ತಿಕವಾಗಿರಿಸುವುದು **ಕೇತಕಿಪುಷ್ಪ**ದ ಸಂಕೇತ ವಾದರೆ ; ಪತಾಕ ಮತ್ತು ಚತುರ ಹಸ್ತದ ಸ್ವಸ್ತಿಕಾಕಾರ **ಜಪಾಕುಸುಮ ಹಸ್ತ**ದ ಲಕ್ಷಣ. **ಪೂಗ ಪುಷ್ಪ**ಕ್ಕೆ ಪದ್ಮಕೋಶಗಳನ್ನು ಸ್ವಸ್ತಿಕವಾಗಿರಿಸುವ ನಿಯಮವಿದ್ದರೆ ; ಅಲಪದ್ಮ ಹಸ್ತಗಳನ್ನು ಸ್ವಸ್ತಿಕಾಕಾರ ವಾಗಿಸುವುದು **ಕಪಿತ್ಥಫಲ**ದ ಸಂಕೇತ. **ಸಾಲವೃಕ್ಷ** ಮತ್ತು **ನಿಂಬಾಫಲ**ವನ್ನು ಶುಕತುಂಡ ಹಸ್ತಗಳನ್ನು ಸ್ವಸ್ತಿಕವಾಗಿಸುವುದರಿಂದ ಸೂಚಿಸಿದರೆ; **ಉತ್ತರಾಭಾದ್ರಾ ನಕ್ಷತ್ರಕ್ಕೆ** ಸೂಚೀಹಸ್ತವನ್ನು ಸ್ವಸ್ತಿಕಾಕಾರ ಮಾಡುವುದು ಕ್ರಮ.

ಕಳೆದ ವಾರ್ಷಿಕ ವಿಶೇಷ ಸಂಚಿಕೆಯ ವಿನೂತನ ಪ್ರಯತ್ನಗಳಿಗೆ ಸಹೃದಯ ಓದುಗರಿಂದ, ವಿದ್ವಾಂಸರಿಂದ, ಕಲಾರಸಿಕರಿಂದ ಮೆಚ್ಚುಗೆಯ ಭರಪೂರವೇ ಹರಿದುಬಂದಿದೆ. ಎಲ್ಲರಿಗೂ ಧನ್ಯವಾದಗಳು.

ಬೆಂಗಳೂರಿನ ನೃತ್ಯ ಕಲಾವಿದರಾದ ವಿದ್ವಾನ್ ಪ್ರವೀಣ್ ಕುಮಾರ್, ವಿದ್ಯಾ, ಆರ್.ರಾಜಕುಮಾರ್, ಲಲಿತಾ ಎಂ.ರಾವ್, ಅಭಿನೇತ್ರಿ, ಜಿ. ಎಸ್. ನಾಗೇಶ್, ಸುಮಾ ರಾಜೇಶ್, ಶಿರೀಶ, ವಿದ್ವಾನ್ ಶ್ರೀವತ್ಸ–ಸೌಂದರ್ಯ, ಡಾ. ಮಾಲಿನಿ ರವಿಶಂಕರ್, ಚಂದ್ರಶೇಖರ್ ಎಂ, ಶಿವಕುಮಾರ್, ಮೃದಂಗ ವಿದ್ವಾನ್ ವಿ.ಆರ್.ಚಂದ್ರಶೇಖರ್, ಕಲಾರಸಿಕರಾದ ಶಿವರುದ್ರಯ್ಯ, ಮುರಳೀಧರ್, ಮೈಸೂರಿನ ನೃತ್ಯ ಕಲಾವಿದರಾದ ಡಾ. ತುಳಸೀ ರಾಮಚಂದ್ರ, ಮಿತ್ರಾ ನವೀನ್, ಕಟೀಲಿನ ಸಂಸ್ಕೃತ ವಿದ್ವಾಂಸ ವಾಸುದೇವ, ಹಾಸನದ ತಾರಾ, ದಾವಣಗೆರೆಯ ಡಾ. ಬಿ. ಮಂಗಳಾ ಶೇಖರ್, ಪುತ್ತೂರಿನ ಕಲಾವಿದರಾದ ಬಿ. ತೇಜಸ್ವಿನಿ, ಶ್ರೀಲಕ್ಷ್ಮಿ, ಶ್ರುತಿ ವಿ.ರೈ, ವಿದ್ಯಾ ಮನೋಜ್, ಸ್ವಸ್ತಿಕ ಆರ್. ಶೆಟ್ಟಿ, ನೆಲ್ಯಾಡಿಯ ಅನುಷಾ ಜೈನ್ ಮತ್ತು ಸೌಜನ್ಯ, ಕೊಕ್ಕಡದ ಶ್ರಾವ್ಯ ಜಿ.ಎಸ್, ಉಡುಪಿಯ ಮಂಜರೀ ಚಂದ್ರಸನಿಲ್, ಶ್ರೀವಿದ್ಯಾ ಸಂದೇಶ್ ಕುಮಾರ್, ಟಿ.ಎಂ.ಎ.ಪೈ ಕಾಲೇಜು ಕಳೆದ ಸಂಚಿಕೆಯಿಂದ ಈ ವರ್ಷದ ಅಂತ್ಯದವರೆಗೂ ಚಂದಾ–ಸದಸ್ಯರಾಗಿದ್ದಾರೆ.

ಚಂದಾ ವಿವರ

ನೂಪುರ ಭ್ರಮರಿ ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯಾದರೂ ಖರ್ಚು–ವೆಚ್ಚಗಳನ್ನು ಸರಿದೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಪ್ರಾರಂಭಿಕ ವರ್ಷಗಳಿಂದಲೂ ಚಂದಾ ವಿವರ ಕಡ್ಡಾಯವಾಗಿರಲಿಲ್ಲ; ಫಲವಾಗಿ ಎಷ್ಟೋ ಬಾರಿ ಸಂಚಿಕೆಗಳನ್ನು ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಪತ್ರಿಕೆಗೆ ಅದರದ್ದೇ ಆದ ಜವಾಬ್ದಾರಿ, ಸಮಸ್ಯೆಗಳಿರುವ ಕಾರಣ ಉಚಿತವಾಗಿ ಕಳಿಸಿಕೊಡುವುದು ಅಥವಾ ಗೌರವ ಪ್ರತಿ ನೀಡುವುದು ಎಲ್ಲಾ ಸಂದರ್ಭದಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕೆಳಕಂಡ ಚಂದಾವಿವರಗಳನ್ನು ಲಕ್ಷಿಸಿ 'ಸಂಪಾದಕರು, ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ಮನಿಯಾರ್ಡರ್‌ನಲ್ಲಿ ಮೊತ್ತವನ್ನು ಕಳಿಸಬೇಕೆಂದು ಕೋರುತ್ತೇವೆ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್ ಕಮಿಷನ್ ಮೊತ್ತ 40/–ರೂ ಹೆಚ್ಚಿಗೆ ಸೇರಿಸಿ ಕಳಿಸಬೇಕೆಂದು ಮನವಿ.

ನೂಪುರ ಭ್ರಮರಿಯ ಹಿಂದಿನ ಸಂಚಿಕೆಗಳಲ್ಲಿ ಕೆಲವೇ ಕೆಲವು ಲಭ್ಯವಿವೆ. ಆಸಕ್ತರು ಲಭ್ಯತೆಯನ್ನನುಸರಿಸಿ ಖರೀದಿಸಿ ಪ್ರಯೋಜನ ಪಡೆದುಕೊಳ್ಳಬಹುದು. ಹಿಂದಿನ ಸಂಚಿಕೆಗಳ ಬಿಡಿಪ್ರತಿ ಬೆಲೆ–20ರೂ. ; ವಿಶೇಷ ಸಂಚಿಕೆ –30ರೂ. ಆಜೀವ ಸದಸ್ಯರಾದಲ್ಲಿ ಅಥವಾ ಮುದ್ರಣ ನಿಧಿಗೆ ಸಹಕರಿಸಿದವರಿಗೆ ಸದಸ್ಯತ್ವದ ದಿನಾಂಕದಿಂದ ಮೊದಲ್ಗೊಂಡು ಆಜೀವಪರ್ಯಂತ ಪತ್ರಿಕೆಯನ್ನು ಕಳಿಸಿಕೊಡಲಾಗುವುದು. ಆಜೀವ ಸದಸ್ಯರು/ಮಹಾಪೋಷಕರು ಪತ್ರಿಕೆಯ ಒಟ್ಟಾರೆ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಕೈಜೋಡಿಸಬಹುದಾಗಿದ್ದು; ಪತ್ರಿಕೆಗೆ ಸಂಬಂಧಿಸಿದ ಕಾರ್ಯಕ್ರಮ, ನೀತಿ–ನಿಯಮ ಇತ್ಯಾದಿ ರೂಪುರೇಷೆಗೂ ಜವಾಬ್ದಾರಿಯಾಗಿರುತ್ತಾರೆ. ಅಂತೆಯೇ ಆಸಕ್ತ ಸದಸ್ಯರು ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕೆ ಮತ್ತು ಅದರ ಸಂಬಂಧಿತ ಅಂಗಸಂಸ್ಥೆಗಳ ಕಾರ್ಯಕ್ರಮದ ಮೇಲ್ವಿಚಾರಕರಾಗಬಹುದು.

ವಾರ್ಷಿಕ ಚಂದಾ : 130 ರೂ.
ಆಜೀವ ಸದಸ್ಯತ್ವ : 1000 ರೂ (ಪೋಷಕ)
ಮುದ್ರಣ ನಿಧಿ ಸಹಾಯ ಧನ : 3,500 (ಮಹಾಪೋಷಕ)

ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಸಂಶೋಧನಾ ಅಸೋಸಿಯೇಷನ್‌ನ ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.

ವಿಷ್ಣುಪ್ರಸಾದ್ ನಿಡ್ಡಾಜೆ, ಪ್ರಸರಣಾಧಿಕಾರಿ (ಮೊಬೈಲ್ : 94817 65544)
ಎನ್. ರಾಮಭಟ್, ಉಡುಪಿ (ಮೊಬೈಲ್ : 92414 42833)
ದೀಪಕ್ ಕುಮಾರ್, ಪುತ್ತೂರು, ದಕ್ಷಿಣ ಕನ್ನಡ (ಮೊಬೈಲ್ : 99640 23548)
ಬಿ.ಜಿ. ನಾರಾಯಣ ಭಟ್, ಮಡಿಕೇರಿ (ಫೋನ್ : 08272–222709)

ರಾಕೇಶ್ ಕುಮಾರ್ ಕಮ್ಮಜೆ ಅವರ ಉನ್ನತ ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಅವರ ಕೋರಿಕೆಯಂತೆ 'ರಂಗಸ್ಥಳ' ಅಂಕಣ ಮುಕ್ತಾಯ ಕಂಡಿದೆ. ಅವರಿತ್ತ ಸಹಕಾರಕ್ಕೆ ಧನ್ಯವಾದ ಅರ್ಪಿಸುತ್ತಾ ; ಅವರ ಭವಿಷ್ಯ ಉಜ್ವಲವಾಗಿರಲೆಂದು ನೂಪುರಭ್ರಮರಿ ಪತ್ರಿಕಾ ಬಳಗ ಹಾರೈಸುತ್ತದೆ.

ಸಾದರಸ್ವೀಕಾರ

ಭಕ್ತಿ ರಕ್ಷೆ : ದೇವನಾಮ ಸಂಕೀರ್ತನೆ– ಭಕ್ತಿಗೀತೆಗಳ ಆಡಿಯೋ ಸಂಕಲನ
ಪದರಚನೆ ಹಾಗೂ ರಾಗಸಂಯೋಜನೆ : **ಶ್ರೀಮತಿ ವೇದಪುಷ್ಪ, ಬೆಂಗಳೂರು (ನಿರ್ಮಾಣ)**
ಭಾಗ 1 : ಸಂಗೀತ ಸಂಯೋಜನೆ ಮತ್ತು ಗಾಯನ : ವಿದ್ವಾನ್ ರಮೇಶ ಚಡಗ, ದಿವ್ಯಶ್ರೀ.
ಭಾಗ 2 : ಸಂಗೀತ ಸಂಯೋಜನೆ : ಶ್ಯಾಮಲಾ ಜಿ.ಭಾವೆ ಮತ್ತು ವಿದ್ವಾನ್ ಚಾಮಿ. ಶ್ರೀನಿವಾಸ್.ಗಾಯನ : ವಿದ್ವಾನ್ ವಾಗೀಶ್ ಭಟ್, ವಿದುಷಿ ಕವಿತಾ ಸರಳಾಯ, ವಿದುಷಿ ತ್ರಿವೇಣಿ ವೆಂಕಟರಾಂ, ವಿದುಷಿ ಶ್ಯಾಮಲಾ ಜಿ.ಭಾವೆ ಮತ್ತು ದಿವ್ಯಶ್ರೀ.

ಸಂಚಿಕೆಗಳಿಗೆ ಅನುದಾನವಿತ್ತವರು

ಭಾರತೀಯ ಭಾಷಾ ಸಂಸ್ಥಾನ

ಮಾನಸ ಗಂಗೋತ್ರಿ,

ಮೈಸೂರು

Published with Financial Assistance from the Central Institute of Indian Languages

(Ministry of Human Resource Development, Department of Higher Education, Govt of India)

Manasagangothri, Mysore-570006

Vide Sanction letter 53-4(1)/2011-12/Kan/LM/GRNT dated Jan. 20, 2012 under the scheme of Grant-in-Aid